ಸಂಪಾದಕರು: ರವಿಕುಮಾರ್ ಸಿ.ಹೆಚ್.

RNI: KARKAN/2021/80805

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

# ಸೂರ್ಯ ಪ್ರಗತಿ

SP NEWS ಡಿಜಿಟಲ್ ನ್ಯೂಸ್ ಕಹಾನಿ

SURYA PRAGATHI Kannada daily

ಪ್ರತಿ ಸುದ್ದಿಯ ಧ್ವನಿ

suryapragathidailynews@gmail.com 9901010109 L2/RNP-1285/TMR/2025-27

Volume: 05 Issue:125
ಸಂಪುಟ: 05 ಸಂಚಿಕೆ: 125

Date:02-06-2026 Tuesday

RNI NO : KARKAN/2021/80805 L2/RNP-1285/TMR/2025-27

Page :4 ಪುಟ : 4

Price: 1.00 ಬೆಲೆ: 1.00 ರೂ

## ನನಗೆ ಯಾರೂ ಹೂವಿನ ಹಾರ ಹಾಕ್ಬೇಡಿ: ನಿಯೋಜಿತ ಸಿಎಂ ಡಿ.ಕೆ ಶಿವಕುಮಾರ್





ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾಗುತ್ತಿದ್ದಂತೆ ಡಿ.ಕೆ ಶಿವಕುಮಾರ್ ಅವರ ನಿವಾಸಕ್ಕೆ ಮಾಜಿ ಸಚಿವರು, ಶಾಸಕರು ಮತ್ತು ಕಾರ್ಯಕರ್ತರ ದಂಡೇ ಹರಿದು ಬರುತ್ತಿದ್ದು, ಅವರಿಗೆ ಹೂವಿನ ಹಾರ ಹಾಕಿ ವಿಶ್ ಮಾಡುತ್ತಿದ್ದಾರೆ.

ಆದರೆ ನನಗೆ ಯಾರೂ ಹೂವಿನ ಹಾರ ಹಾಕ್ಬೇಡಿ ಎಂದು ನಿಯೋಜಿತ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರಿಗೆ ಮನವಿ ಮಾಡಿದ್ದಾರೆ.

ನಗರದಲ್ಲಿ ಮಾಧ್ಯಮಗಳ ಜೊತೆ ಮಾತನಾಡಿ ಡಿಕೆ ಶಿವಕುಮಾರ್ ಅವರು, ಕಾರ್ಯಕರ್ತರ ಉತ್ಸಾಹ ಗೊತ್ತಾಗುತ್ತದೆ. ಬೇರೆ ಬೇರೆ ವಿಷಯಗಳು ಇರೋದ್ರಿಂದ ಹೆಚ್ಚು ಜನರನ್ನು ಪ್ರಮಾಣ ವಚನದ ವೇಳೆ ಕರೆಸಲು ಆಗತ್ತಿಲ್ಲ. ಹೊರಗಡೆ ಬಂದು ನೋಡಿದ್ರೂ ಅಭ್ಯಂತರ ಇಲ್ಲ. ಯಾರೂ ನನಗೆ ಹೂವಿನ ಹಾರ ಹಾಕ್ಬೇಡಿ ಎಂದು ಮನವಿ ಮಾಡಿದರು.

ನನಗೆ ಅಲರ್ಜಿ ಇದೆ. ಬೇರೆ ಹೂವಿನ ಹಾರ ಸುಂಗಧರಾಜ ಹೂವಿನ ಹಾರಕ್ಕೆ ತಾಗಿರುತ್ತದೆ. ಇದರಿಂದ ಕಡಿತ ಉಂಟಾಗುತ್ತದೆ. ಯಾವ ಹೂವಿನ ಹಾರವನ್ನೂ ತರಬೇಡಿ. ಅದನ್ನೆಲ್ಲ ನಿಷೇಧ ಮಾಡಿದ್ದೇನೆ ಎಂದು ಡಿಕೆ ಶಿವಕುಮಾರ್ ತಿಳಿಸಿದ್ದಾರೆ. ಸಿಎಂ ಆಗುತ್ತಿರೋದು ನಾನಲ್ಲ. ಒಬ್ಬ ಪಕ್ಷದ ನಿಷ್ಠಾವಂತ ಕಾರ್ಯಕರ್ತ ಸಿಎಂ ಆಗ್ತಿರೋದು. ವಿದ್ಯಾರ್ಥಿ ದೇಸೆಯಿಂದ ಕೆಲಸ ಮಾಡಿಕೊಂಡು ಬಂದಿದ್ದೇನೆ ಎಂದರು.

ಇದೇ ವೇಳೆ, ನಾನು ಸಿದ್ದರಾಮಯ್ಯ ಇಬ್ಬರೂ ನಾಳೆ ದೆಹಲಿಗೆ ಹೋಗುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

## ಪರಮೇಶ್ವರ್, ರಾಜಣ್ಣಗೆ ಗೌರವ ಡಾಕ್ಟರೇಟ್ ನೀಡದಿರಲು ತುಮಕೂರು ವಿವಿ ನಿರ್ಧಾರ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು ವಿಶ್ವವಿದ್ಯಾಲಯದ 19ನೇ ಘಟಿಕೋತ್ಸವ ಜೂನ್ 3ರಂದು ನಡೆಯಲಿದೆ. ಈ ಬಾರಿ ಸಕ್ರಿಯ ರಾಜಕಾರಣಿಗಳಿಗೆ ಗೌರವ ಡಾಕ್ಟರೇಟ್ ನೀಡದಿರಲು ನಿರ್ಧರಿಸಲಾಗಿದೆ ಎಂದು ಕುಲಪತಿ ಪ್ರೊ.ಎಂ.ವೆಂಕಟೇಶ್ವರಲು ಮಾಹಿತಿ ನೀಡಿದ್ದಾರೆ. ರಾಜಕಾರಣಿಗಳನ್ನು ಹೊರತು ಪಡಿಸಿ ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ನಿರ್ಧರಿಸಲಾಗಿದೆ.

ತುಮಕೂರು ವಿಶ್ವವಿದ್ಯಾಲಯದ 19ನೇ ಘಟಿಕೋತ್ಸವವು ಜೂನ್ 3ರಂದು ವಿಶ್ವವಿದ್ಯಾಲಯದ ಆವರಣದಲ್ಲಿ ನಡೆಯಲಿದ್ದು, ಈ ಬಾರಿ ಸಕ್ರಿಯ ರಾಜಕಾರಣಿಗಳಿಗೆ ಗೌರವ ಡಾಕ್ಟರೇಟ್ ನೀಡದಿರಲು ವಿವಿಯ ಪರಿಶೀಲನಾ ಸಮಿತಿ ಮಹತ್ವದ ನಿರ್ಧಾರ ಕೈಗೊಂಡಿದೆ. ಈ ಹಿನ್ನೆಲೆ ಮಾಜಿ ಸಚಿವರಾದ ಡಾ. ಜಿ. ಪರಮೇಶ್ವರ್ ಹಾಗೂ ಕೆ. ಎನ್. ರಾಜಣ್ಣಗೆ ಗೌರವ ಡಾಕ್ಟರೇಟ್ ನೀಡದಿರಲು ನಿರ್ಧರಿಸಲಾಗಿದೆ ಎಂದು ತುಮ ಕೂರು ವಿವಿ ಕುಲಪತಿ ಪ್ರೊ. ಎಂ. ವೆಂಕಟೇಶ್ವರಲು ತಿಳಿಸಿದ್ದಾರೆ.

ಮಾತನಾಡಿದ ಕುಲಪತಿ ಪ್ರೊ. ಎಂ. ವೆಂಕಟೇಶ್ವರಲು, ತುಮಕೂರು ವಿಶ್ವವಿದ್ಯಾಲಯಕ್ಕೆ ಡಾ. ಜಿ. ಪರಮೇಶ್ವರ್ ಹಾಗೂ ಕೆ. ಎನ್. ರಾಜಣ್ಣ ಅವರ ಕೊಡುಗೆ ತುಂಬಾನೇ ಇದೆ. ಹೀಗಾಗಿ ಇಬ್ಬರಿಗೂ ಗೌರವ ಡಾಕ್ಟರೇಟ್ ನೀಡಬೇಕೆಂಬ ಆಶಯ ನಮಗಿತ್ತು. ಈ ನಿಟ್ಟಿನಲ್ಲಿ ನಾವು ಮೊನ್ನೆ ಇಬ್ಬರ ಹೆಸರುಗಳನ್ನು ಸೇರಿಸಿದ್ದೆವು. ಆದರೆ, ಪರಿಶೀಲನಾ ಸಮಿತಿಯು ಬೇರೆ ಬೇರೆ ರಾಜ್ಯಗಳಲ್ಲಿ ರಾಜಕಾರಣಿಗಳಿಗೆ ಗೌರವ ಡಾಕ್ಟರೇಟ್ ನೀಡುವ ನಿಯಮಗಳೇನು ಹಾಗೂ ಇತ್ತೀಚಿನ ದಿನಗಳಲ್ಲಿ ಕರ್ನಾಟಕದಲ್ಲಿ ಯಾವ್ಯಾವ ರಾಜಕಾರಣಿಗಳು ಇದನ್ನು ಸ್ವೀಕರಿಸಿದ್ದಾರೆ ಅಥವಾ ನಿರಾಕರಿಸಿದ್ದಾರೆ ಎಂಬುದರ ಕುರಿತು ಚರ್ಚಿಸಲಾಗಿದೆ.

ಮೂವರು ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ

ರಾಜಕಾರಣಿಗಳನ್ನು ಹೊರತುಪಡಿಸಿ ಈ ಬಾರಿ ವಿವಿಧ ಕ್ಷೇತ್ರಗಳ ಮೂವರು ಸಾಧಕರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ನಿರ್ಧರಿಸಲಾಗಿದೆ. ಸ್ವಾತಂತ್ರ್ಯ ಹೋರಾಟಗಾರ ಟಿ. ಆರ್. ರೇವಣ್ಣ, ಕನ್ನಡದ ಕವಿ, ವಚನಕಾರ ಹಾಗೂ ಚಿಂತಕ ದ್ವಾರನಕುಂಟೆ ಪಾತಣ್ಣ, ಮತ್ತು ಪ್ರತಿಷ್ಠಿತ ಚಾರ್ಟರ್ಡ್ ಅಕೌಂಟೆಂಟ್ ಹಾಗೂ ವೃತ್ತಿನಿರತ ವಕೀಲ ಎನ್. ಆರ್. ಪ್ರದೀಪ್ ಅವರಿಗೆ ಈ ಸಾಲಿನ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗುತ್ತಿದೆ.

ರಾಜ್ಯಪಾಲರಿಗೆ ಆಹ್ವಾನ

ಈ ಬಾರಿಯ ಘಟಿಕೋತ್ಸವಕ್ಕೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ರಿಗೆ ಆಹ್ವಾನಿಸಲಾಗಿದ್ದು, ಮುಖ್ಯವ ುಂತ್ರಿಗಳ ಪದಗ್ರಹಣ ಕಾರ್ಯಕ್ರಮ ಇರುವುದರಿಂದ ಅವರು ಬರುವುದು ಇನ್ನೂ ಅಧಿಕೃತವಾಗಿಲ್ಲ. ಘಟಿಕೋತ್ಸವಕ್ಕೂ ಮುನ್ನ ರಾಜ್ಯಪಾಲರು ತುಮಕೂರು ವಿವಿಯಲ್ಲಿ ನ ೂತನವಾಗಿ ಸ್ಥಾಪನೆಗೊಂಡಿರುವ ತುವ ುಕೂರು ಇನ್ನೋವೇಶನ್ ಇನ್ ಕ್ಯುಬೇಶನ್ ಅಂಡ್ ಆಂತ್ರಪ್ರಿನ್ಯುರ್ ಶಿಪ್ ಕೌನ್ಸಿಲ್ ಹಾಗೂ ಗೋ ಗ್ರೀನ್– ಬೈಸಿಕಲ್ ಇನೀಶಿಯೆ ುೀಟೀವ್ ಯೋಜನೆಗಳನ್ನು ಉದ್ಘಾಟಿಸಲಿದ್ದಾರೆ. ಒಟ್ಟು 29 ಲಕ್ಷ ರೂ ವೆಚ್ಚದಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಪದವಿ ಹಾಗೂ ರ್‍ಯಾಂಕ್‌ಗಳ ವಿವರ

ಇನ್ನು ಈ ಬಾರಿಯ ಘಟಿ ಕೋತ್ಸವದಲ್ಲಿ ಒಬ್ಬ ಅಭ್ಯರ್ಥಿಗೆ ಡಿ.ಲಿಟ್ ಪದವಿ, 59 ಅಭ್ಯರ್ಥಿಗಳಿಗೆ ಪಿಎಚ್.ಡಿ , 2,058 ಅಭ್ಯರ್ಥಿಗಳಿಗೆ ಸ್ನಾತಕೋತ್ತರ ಪದವಿ ಹಾಗೂ 8,781 ಅಭ್ಯರ್ಥಿಗಳಿಗೆ ಸ್ನಾತಕ ಪದವಿಗಳನ್ನು ಪ್ರದಾನ ಮಾಡಲಾಗುತ್ತಿದೆ. ವಿಶ್ವವಿದ್ಯಾಲಯವು ಎಲ್ಲಾ ಸ್ನಾತಕೋತ್ತರ ಪದವಿಗಳಿಗೆ ತಲಾ ಐದು ರ್‍ಯಾಂಕ್ ಗಳನ್ನು ಘೋಷಿಸಿದ್ದು, ಒಟ್ಟು 90 ವಿದ್ಯಾರ್ಥಿಗಳಿಗೆ 117 ಚಿನ್ನದ ಪದಕಗಳನ್ನು ಹಾಗೂ ನಾಲ್ಕು ವಿದ್ಯಾರ್ಥಿಗಳಿಗೆ ನಗದು ಬಹುಮಾನವನ್ನು ವಿತರಿಸಲಾಗುತ್ತಿದೆ ಎಂದು ಕುಲಪತಿಗಳು ಮಾಹಿತಿ ನೀಡಿದ್ದಾರೆ.



ತುಮಕೂರು ನಗರದ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ ಹೈಸ್ಕೂಲ್ ಬಡಾವಣೆಯಲ್ಲಿ ಜೂನ್ 1 ರಂದು ಶಾಲಾ ಪ್ರಾರಂಭೋತ್ಸವದ ಹಿನ್ನೆಲೆಯಲ್ಲಿ ಕಂಬಗಳಿಗೆ ಬಾಳೆಕಂದು, ಮಾವಿನ ತೋರಣ ದೊಂದಿಗೆ ಮಕ್ಕಳಿಗೆ ಚಾಕಲೇಟ್ ಹಾಗೂ ರೋಸ್ ನೀಡುವ ಮುಖಾಂತರ ಬರ ಮಾಡಿಕೊಂಡ ಶಿಕ್ಷಕರು.

## ಕೇಂದ್ರ ಮತ್ತು ರಾಜ್ಯ ಸರ್ಕಾರ ಒಂದೇ ನಾಣ್ಯದ ಎರಡು ಮುಖ : ರೈಲ್ವೆ ಸಚಿವ ವಿ.ಸೋಮಣ್ಣ

ಸೂರ್ಯಪ್ರಗತಿ ನ್ಯೂಸ್.ಕಾಂ



ಗುಬ್ಬಿ: ಅಭಿವೃದ್ಧಿ ವಿಚಾರದಲ್ಲಿ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರ ಒಂದೇ ನಾಣ್ಯದ ಎರಡು ಮುಖಗಳಂತೆ ಕೆಲಸ ಮಾಡಬೇಕು. ಸಾಮರಸ್ಯತೆ ಇಲ್ಲವಾದಲ್ಲಿ ಜನಪರ ಕೆಲಸಗಳು ನಡೆಯುವುದಿಲ್ಲ ಎಂದು ಕೇಂದ್ರದ ರೈಲ್ವೆ ಸಚಿವ ವಿ.ಸೋಮಣ್ಣ ತಿಳಿಸಿದರು.

ತಾಲ್ಲೂಕಿನ ಕಸಬ ಹೋಬಳಿ ಕಳ್ಳಿಪಾಳ್ಯ ಗೇಟ್ ಬಳಿಯ ರೈಲ್ವೇ ಕೆಳಸೇತುವೆಗೆ ಗುದ್ದಲಿಪೂಜೆ ನೆರವೇರಿಸಿ ಮಾತನಾಡಿದ ಅವರು ಕೇಂದ್ರ ಸರ್ಕಾರ ಮಹತ್ವದ ಲಸಿಕೆ ಅಭಿಯಾನ ಇಂದು ಆರಂಭಿಸಿದೆ. ಆದರೆ ಈ ವ್ಯಾಕ್ಸಿನ್ ಬಗ್ಗೆ ಯಾರಿಗೂ ಮಾಹಿತಿಯಾಗಲಿ, ಪ್ರಚರವಾಗಲಿ ಮಾಡಿಲ್ಲ. 16900 ವ್ಯಾಕ್ಸಿನ್ ಜಿಲ್ಲೆಗೆ ಬಂದಿದ್ದರೂ ಹೆಣ್ಣು ಮಕ್ಕಳ ಆರೋಗ್ಯ ಬಗ್ಗೆ ಇಲಾಖೆಯು ನಿರಾಸಕ್ತಿ ತೋರಿರುವುದು ಬೇಸರ ತಂದಿದೆ. ಈ ನಡವಳಿಕೆಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸ್ವಾಮ್ಯತೆ ಬಗ್ಗೆ ತಿಳಿಸುತ್ತದೆ. ಎರಡೂ ಸರ್ಕಾರ ಒಗ್ಗೂಡಿ ಮಾಡಬೇಕಾದ ಅಭಿಯಾನ ಜನರಿಗೆ ತಲುಪಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

14 ವರ್ಷದಿಂದ ಮೇಲ್ಪಟ್ಟ ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಮಾರಕ ಕ್ಯಾನ್ಸರ್ ತಡೆಯಲು ಕೇಂದ್ರ ಸರ್ಕಾರ ಈ ಲಸಿಕೆಯನ್ನು ನೀಡಲು ಮಕ್ಕಳನ್ನು ಗುರುತಿಸಿ ರಾಜ್ಯದ 6 ಲಕ್ಷ ಜಿಲ್ಲೆಯ 25 ಸಾವಿರ ಮಕ್ಕಳಿಗೆ ನೀಡಬೇಕಾದ ಲಸಿಕೆಗೆ ಜಿಲ್ಲೆಯಲ್ಲಿ 15900 ವ್ಯಾಕ್ಸಿನ್ ನಲ್ಲಿ ಕೇವಲ ಆರು ಸಾವಿರ ಮಾತ್ರ ನೀಡಿದ್ದಾರೆ. ಅದೂ ಕೂಡ ಸರಿಯಾದ ಮಾಹಿತಿ ಇಲ್ಲ. ಆರೋಗ್ಯ ಇಲಾಖೆ ಬಗ್ಗೆ ಏನೂ ಹೇಳುವುದು ಎಂದು ಬೇಸರ ವ್ಯಕ್ತಪಡಿಸಿದ ಅವರು ರೈಲ್ವೆ ಇಲಾಖೆಯ ಕೆಲಸಗಳು ತ್ವರಿತವಾಗಿ ನಡೆಸಲಾಗಿದೆ. ಈಗಾಗಲೇ 2 ಸಾವಿರ ಕೋಟಿ ಕೆಲಸ ಪ್ರಗತಿಯಲ್ಲಿದೆ. ಈ ಪೈಕಿ ಗುಬ್ಬಿ ತಾಲ್ಲೂಕಿನಲ್ಲಿ 10 ಕೆಳ ಸೇತುವೆ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಬೆಂಗಳೂರು ನಗರದಲ್ಲಿ ರೈಲ್ವೆ ಪ್ರಯಾಣ ಬಳಕೆದಾರರ ಸಂಖ್ಯೆ 30 ಲಕ್ಷಕ್ಕೂ ಅಧಿಕವಿದೆ. ದೇಶದಲ್ಲಿ 3 ಕೋಟಿಗೂ ಅಧಿಕವಿದೆ. ಈ ನಿಟ್ಟಿನಲ್ಲಿ ಲಾಭದಾಯಕ ರೈಲ್ವೆ ಇಲಾಖೆಯನ್ನು ಬೆಳೆಸಲು ಪ್ರಧಾನಿಗಳು ಸಾಕಷ್ಟು ಅನುದಾನ ನೀಡುತ್ತಿದ್ದಾರೆ. ರಾಯದುರ್ಗದಿಂದ ಪಾವಗಡ ಎರಡು ತಿಂಗಳಲ್ಲಿ ಕೆಲಸ ಪೂರ್ಣ ಆಗಲಿದೆ. ಪಾವಗಡದಿಂದ ಮಡಕಶಿರಾ ಇನ್ನೆರೆಡು ತಿಂಗಳು, ನಂತರದಲ್ಲಿ ಕೊರಟಗೆರೆ ಹೀಗೆ ಕೆಲಸ ಪೂರ್ಣ ಗೊಳ್ಳಲಿದೆ. ತುಮಕೂರು ದಾವಣಗೆರೆ ಮಾರ್ಗ ಬಹುತೇಕ ಸಂಪೂರ್ಣವಾಗಿದೆ ಎಂದ ಅವರು ತುಮಕೂರು ಬಳಿ ರೈಲ್ವೆ ಟರ್ಮಿನಲ್ ಕಾಮಗಾರಿ 4 ಸಾವಿರ ಕೋಟಿ ಹಣದಲ್ಲಿ ನಡೆದಿದೆ. 5 ಸಾವಿರ ಉದ್ಯೋಗ ಸೃಷ್ಟಿಸಿ ಲಕ್ಷಾಂತರ ಜನರ ಬದುಕಿಗೆ ಅಧರವಾಗಲಿದೆ. ಈ ಜೊತೆಗೆ ವಸಂತನರಸಾಪುರ ಕೈಗಾರಿಕಾ ವಲಯದಲ್ಲಿ 200 ಹಾಸಿಗೆಯ ಆಸ್ಪತ್ರೆ ಹಾಗೂ 20 ಕೋಟಿ ವೆಚ್ಚದ ಮಹಿಳಾ ಹಾಸ್ಟೆಲ್ ನಿರ್ಮಾಣ ಆಗಲಿದೆ ಎಂದರು.

ಶಾಸಕ ಎಸ್.ಆರ್.ಶ್ರೀನಿವಾಸ್ ಮಾತನಾಡಿ ಕ್ರಿಯಾಶೀಲ ಸಂಸದರಾಗಿ ಸೋಮಣ್ಣ ಅವರು ಕೋಟಿಗಟ್ಟಲೆ ಅನುದಾನ ತಂದು ಜಿಲ್ಲೆಯ ಅಭಿವೃದ್ಧಿ ಮಾಡುತ್ತಿದ್ದಾರೆ. ಲೋಕಸಭಾ ಸದಸ್ಯರು ಈ ಮಟ್ಟದ ಕೆಲಸ ಮಾಡಲು ಸಾಧ್ಯ ಎಂಬುದು ಈ ವರ್ಷದಲ್ಲಿ ನೋಡಿದ್ದೇವೆ. ರೈಲ್ವೆ ಗೇಟ್ ಗಳ ತೆರವು ಮಾಡಿ ಮೇಲ್ಸೇತುವೆ ಹಾಗೂ ಕೆಳಸೇತುವೆ ನಿರ್ಮಾಣ ಮಾಡಿದ್ದಾರೆ. ಜೊತೆಗೆ 90 ಕೋಟಿ ರೂಗಳ ರಸ್ತೆ ಕೆಲಸಗಳನ್ನು ಸಹ ಮಾಡಿಸುತ್ತಿದ್ದಾರೆ. ಈ ಜತೆಗೆ ಅಂತರ್ಜಲ ವೃದ್ಧಿಗೆ ವ್ಯಾಲಿಗಳಿಗೆ ಚೆಕ್ ಡ್ಯಾಂ ನಿರ್ಮಾಣ ಮಾಡಲು ಅನುದಾನ ನೀಡುವಂತೆ ಮನವಿ ಮಾಡಿ, ಅತಿ ಹೆಚ್ಚು ಕರೆಂಟ್ ಬಳಕೆಯ ನಮ್ಮ ತಾಲ್ಲೂಕು ಹೆಚ್ಚು ಕೊಳವೆಬಾವಿ ಹೊಂದಿದೆ. ಈ ನಿಟ್ಟಿನಲ್ಲಿ ಅಂತರ್ಜಲ ವೃದ್ಧಿ ಅತ್ಯವಶ್ಯವಿದೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ರವಿ ಹೆಬ್ಬಾಕ, ದಿಶಾ ಸಮಿತಿ ಸದಸ್ಯ ಹುಚ್ಚಯ್ಯ, ಮುಖಂಡರಾದ ಎಸ್.ಡಿ.ದಿಲೀಪ್ ಕುಮಾರ್, ಬಿ.ಎಸ್.ನಾಗರಾಜು, ಕಳ್ಳಿಪಾಳ್ಯ ಲೋಕೇಶ್, ಪಿ.ಬಿ.ಚಂದ್ರಶೇಖರಬಾಬು, ಎನ್.ಸಿ.ಪ್ರಕಾಶ್, ಜಿ.ಎನ್.ಬೆಟ್ಟಸ್ವಾಮಿ, ಹೊನ್ನಗಿರಿಗೌಡ, ಯೋಗಾನಂದಕುಮಾರ್, ಸಿದ್ದಗಂಗಮ್ಮ, ಬೆಣಚಿಗೆರೆ ರುದ್ರೇಶ್, ಭೈರಪ್ಪ, ಜಿ.ಆರ್.ಶಿವಕುಮಾರ್, ಪ್ರವೀಣ್ ಕಾತರಕಿ ಇನ್ನಿತರರು ಇದ್ದರು.

## ರಸ್ತೆ ಅಪಘಾತದಲ್ಲಿ ಜೆಡಿಎಸ್ ಕಚೇರಿ ಸಹಾಯಕನಿಗೆ ಪೆಟ್ಟು



ತುಮಕೂರು: ನಗರದ ಜಿಲ್ಲಾ ಜೆಡಿಎಸ್ ಕಚೇರಿಯ ಕಚೇರಿ ಸಹಾಯಕ ನರಸಿಂಹಮೂರ್ತಿ ರಸ್ತೆ ಅಪಘಾತದಿಂದ ಗಾಯಗೊಂಡು ನಗರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಜಿಲ್ಲಾ ಜೆಡಿಎಸ್‌ಅಧ್ಯಕ್ಷ ಹೆಚ್. ನಿಂಗಪ್ಪ, ನಗರಅಧ್ಯಕ್ಷ ಟಿ.ಹೆಚ್. ಜಯರಾಮ್, ಕಾರ್ಯಾಧ್ಯಕ್ಷ ಟಿ.ಎಸ್. ಮೋಹನ್‌ಕುಮಾರ್, ಎಸ್ಸಿ ಘಟಕ ರಾಜ್ಯ ಉಪಾಧ್ಯಕ್ಷ ಸೋಲಾರ್ ಕೃಷ್ಣಮೂರ್ತಿ ಮತ್ತಿತರರು ಆಸ್ಪತ್ರೆಗೆ ತೆರಳಿ ಗಾಯಾಳು ನರಸಿಂಹಮೂರ್ತಿಗೆ ಸ್ವಾಂತ್ವನ ಹೇಳಿದರು.

## ರಾಜ್ಯಾದ್ಯಂತ ಶಾಲೆಗಳ ಪುನರಾರಂಭ ಕಲಿಕಾ ಚೇತರಿಕೆ ವರ್ಷ ಆಂದೋಲನಕ್ಕೆ ಡಿ.ಸಿ.ಚಾಲನೆ

ಸೂರ್ಯಪ್ರಗತಿ ನ್ಯೂಸ್.ಕಾಂ



ತುಮಕೂರು: 2026–27ನೇ ಶೈಕ್ಷಣಿಕ ವರ್ಷದ ಅಂಗವಾಗಿ ರಾಜ್ಯಾದ್ಯಂತ ಇಂದು ಶಾಲೆಗಳು ಪುನರಾರಂಭಗೊಂಡ ಹಿನ್ನೆಲೆಯಲ್ಲಿ ತುಮಕೂರು ನಗರದ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಪಾಠಶಾಲೆ, ಎಂಆರ್‌ಸಿ ಶಾಲೆಯಲ್ಲಿ ಕಲಿಕಾ ಚೇತರಿಕೆ ವರ್ಷ ಹಾಗೂ ದಾಖಲಾತಿ ಆಂದೋಲನ ಕಾರ್ಯಕ್ರಮಕ್ಕೆ ಜಿಲ್ಲಾಧಿಕಾರಿ ಶುಭ ಕಲ್ಯಾಣ್ ಸೋಮವಾರ ಚಾಲನೆ ನೀಡಿದರು.

ಶಾಲೆಯಲ್ಲಿನ ಶೈಕ್ಷಣಿಕ ಚಟುವಟಿಕೆಗಳು ಹಾಗೂ ವಿದ್ಯಾರ್ಥಿಗಳಿಗೆ ಕಲ್ಪಿಸಲಾಗಿರುವ ಮೂಲಭೂತ ಸೌಲಭ್ಯಗಳ ಕುರಿತು ಪರಿಶೀಲನೆ ನಡೆಸಿ ಜಿಲ್ಲಾಧಿಕಾರಿಗಳು, ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳು ಹಾಗೂ ಸಮವಸ್ತ್ರಗಳನ್ನು ವಿತರಿಸಿ, ವಿದ್ಯಾರ್ಥಿಗಳಿಗೆ ಹೊಸ ಶೈಕ್ಷಣಿಕ ವರ್ಷಕ್ಕೆ ಶುಭಾಶಯ ಕೋರಿದರು.

ನಂತರ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದ ಜಿಲ್ಲಾಧಿಕಾರಿ, ನಿಯಮಿತ ಹಾಜರಾತಿ, ಗುಣಮಟ್ಟದ ಶಿಕ್ಷಣ ಹಾಗೂ ಸರ್ವತೋಮುಖ ವ್ಯಕ್ತಿತ್ವ ವಿಕಸನದ ಮಹತ್ವವನ್ನು ತಿಳಿಸಿದರು. ಶಿಕ್ಷಣವು ವಿದ್ಯಾರ್ಥಿಗಳ ಭವಿಷ್ಯ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಪ್ರತಿಯೊಬ್ಬ ವಿದ್ಯಾರ್ಥಿಯೂ ಶ್ರದ್ಧೆಯಿಂದ ಕಲಿಕೆಯಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದರು.

ಶಿಕ್ಷಕರೊಂದಿಗೆ ಚರ್ಚಿಸಿದ ಜಿಲ್ಲಾಧಿಕಾರಿಗಳು, ಶಾಲಾ ದಾಖಲಾತಿ ಹೆಚ್ಚಳಕ್ಕೆ ವಿಶೇಷ ಒತ್ತು ನೀಡುವಂತೆ ಹಾಗೂ ವಿದ್ಯಾರ್ಥಿಗಳ ಕಲಿಕಾ ಮಟ್ಟವನ್ನು ಮತ್ತಷ್ಟು ಸುಧಾರಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿದರು.

ಶಾಲೆಯ ಮೊದಲ ದಿನವೇ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕಗಳು ಮತ್ತು ಸಮವಸ್ತ್ರಗಳ ವಿತರಣೆ ಯಶಸ್ವಿಯಾಗಿ ನಡೆದಿದ್ದು, ಮಕ್ಕಳು ಉತ್ಸಾಹದಿಂದ ಹೊಸ ಶೈಕ್ಷಣಿಕ ವರ್ಷವನ್ನು ಸ್ವಾಗತಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಪೊಲೀಸ್ ಅಧೀಕ್ಷಕ ಅಶೋಕ್ ಕೆ.ವಿ., ಹೆಚ್ಚುವರಿ ಪೊಲೀಸ್ ಅಧೀಕ್ಷಕ ಎಂ.ಎಲ್. ಪುರುಷೋತ್ತಮ್, ಶಿಕ್ಷಣ ಇಲಾಖೆಯ ಅಧಿಕಾರಿಗಳು, ಶಿಕ್ಷಕರು, ಶಾಲಾ ಸಿಬ್ಬಂದಿ, ಪೋಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಎಂಎಲ್‌ಸಿ ಡಿ ಟಿ ಶ್ರೀನಿವಾಸ್ ರವರಿಗೆ ಸಚಿವ ಸ್ಥಾನ ನೀಡಲು ಆಗ್ರಹ

ಸೂರ್ಯಪ್ರಗತಿ ನ್ಯೂಸ್.ಕಾಂ



ಮಧುಗಿರಿ:–ಕರ್ನಾಟಕ ರಾಜ್ಯ ಯಾದವ ಸಂಘದ ರಾಜ್ಯ ಅಧ್ಯಕ್ಷರು ಹಾಗೂ ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷದ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷರು ಹಾಗೂ ಪ್ರಸ್ತುತ ವಿಧಾನ ಪರಿಷತ್ ಸದಸ್ಯರಾದ ಡಿಟಿ ಶ್ರೀನಿವಾಸ್ ರವರಿಗೆ ಕರ್ನಾಟಕ ಸರ್ಕಾರದಲ್ಲಿ ಸಚಿವ ಸ್ಥಾನ ನೀಡುವೇಕೆಂದು ಮಧುಗಿರಿ ತಾಲೂಕು ಯಾದವ ಮುಖಂಡ ಎಂವಿ ಮೂಡ್ಲಿ ಗಿರೀಶ್ ರವರು ಆಗ್ರಹಿಸಿದ್ದಾರೆ.

ಹಿಂದುಳಿದ ವರ್ಗಗಳ ಅಭಿವೃದ್ಧಿ ಹಾಗೂ ಯುವಕರ ಸಬಲೀಕರಣ ಹಾಗೂ ಸಂಘಟನಾ ಕ್ಷೇತ್ರದಲ್ಲಿ ಅಪಾರ ಅನುಭವವುಳ್ಳ ಡಿಟಿ ಶ್ರೀನಿವಾಸ್ ರವರು ಕಾಂಗ್ರೆಸ್ ಪಕ್ಷದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಪಕ್ಷ ಕಟ್ಟುವಲ್ಲಿ ಹೆಚ್ಚಿನ ಶ್ರಮವಹಿಸಿದ್ದಾರೆ ಇವರ ಅನುಭವ ಜನಪರ ಕಾಳಜಿ ಹಾಗೂ ಸಂಘಟನಾ ಶಕ್ತಿಯನ್ನು ಪರಿಗಣಿಸಿ ಮುಂದಿನ ಮುಖ್ಯಮಂತ್ರಿಗಳು ತಮ್ಮ ಸಚಿವ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕೆಂದು ಪತ್ರಿಕಾಗೋಷ್ಠಿಯಲ್ಲಿ ಹೇಳಿದರು

ಕರ್ನಾಟಕದಲ್ಲಿ ಯಾದವ ಸಮುದಾಯ ಸುಮಾರು 20 ಲಕ್ಷಕ್ಕೂ ಅಧಿಕ ಮತದಾರರಿದ್ದು ಯಾದವ ಸಮುದಾಯದ ಜನಪ್ರತಿನಿಧಿಗೆ ಸಚಿವ ಸ್ಥಾನ ನೀಡಿದರೆ ಈ ಸಮುದಾಯವು ಯಾವಾಗಲೂ ಕೂಡ ಕಾಂಗ್ರೆಸ್ ಪರ ಇರುತ್ತದೆ ಎಂದು ತಿಳಿಸಿದರು

## ಮಲ್ಲಿಕಾರ್ಜುನ ಖರ್ಗೆ ಅವರು ದಲಿತ ಮುಖ್ಯ ಮಂತ್ರಿ ಮಾಡುವ ಅವಕಾಶವಿದ್ದರೂ ಕೈಚಲ್ಲಿದ್ದಾರೆ

ಸೂರ್ಯಪ್ರಗತಿ ನ್ಯೂಸ್.ಕಾಂ



ತುಮಕೂರು: ಎಂಟು ವರ್ಷಗಳ ಕಾಲ ಕೆ.ಪಿ.ಸಿ.ಸಿ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನೆಡೆಸಿರುವ ಡಾ.ಜಿ.ಪರಮೇಶ್ವರ್ ಅವರನ್ನು ಉಪ ಮುಖ್ಯಮಂತ್ರಿಯನ್ನಾಗಿ ನೇಮಿಸುವುದರ ಜೊತೆಗೆ, ಕೊಳ್ಳೆಗಾಲ ಕ್ಷೇತ್ರದ ಶಾಸಕರಾದ ಎ.ಆರ್.ಕೃಷ್ಣಮೂರ್ತಿ ಅವರಿಗೆ ಸಚಿವ ಸ್ಥಾನ ನೀಡುವಂತೆ ಕಾಂಗ್ರೆಸ್ ಮುಖಂಡರಾದ ಅಗಳಕೋಟೆ ನರಸಿಂಹರಾಜು ಕಾಂಗ್ರೆಸ್ ಪಕ್ಷದ ಹೈಕಮಾಂಡನ್ನು ಮನವಿ ಮಾಡಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತುಮಕೂರು ಜಿಲ್ಲೆಯವರಾದ ಡಾ.ಜಿ.ಪರಮೇಶ್ವರ್ ಎಂಟು ವರ್ಷಗಳ ಕಾಲ ಕೆಪಿಸಿಸಿ ಅಧ್ಯಕ್ಷರಾಗಿ ಪಕ್ಷವನ್ನು ಮುನ್ನೆಡೆಸಿ, ತಾನು ಸೋತರು, ಪಕ್ಷವನ್ನು ಗೆಲ್ಲಿಸಿ ಅಧಿಕಾರಕ್ಕೆ ತರುವಲ್ಲಿ ಶ್ರಮಿಸಿದ್ದರು. ಇಂತಹ ವ್ಯಕ್ತಿಗೆ ಹಲವು ಬಾರಿ ಮುಖ್ಯಮಂತ್ರಿಯಾಗುವ ಅವಕಾಶಗಳು ಕೈತಪ್ಪಿವೆ. ನೂತನ ಸಚಿವ ಸಂಪುಟದಲ್ಲಿ ಅವರನ್ನು ಉಪಮುಖ್ಯಮಂತ್ರಿ ಮಾಡಿ, ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಮಾಡಬೇಕು. ಹಾಗೆಯೇ ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲ ಕ್ಷೇತ್ರದ ಶಾಸಕರಾದ ಕೃಷ್ಣಮೂರ್ತಿ ಅವರನ್ನು ಮಂತ್ರಿ ಮಾಡಬೇಕೆಂಬುದು ನಮ್ಮಗಳ ಆಗ್ರಹವಾಗಿದೆ ಎಂದರು.

ಎ ಆರ್ ಕೃಷ್ಣಮೂರ್ತಿ ರವರು 1989ರಿಂದ ಸಂತೆಮರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ತಮ್ಮ ರಾಜಕೀಯ ಜೀವನವನ್ನು ಪ್ರಾರಂಭಿಸಿದ್ದು 1994 ಮತ್ತು 1999 ರಲ್ಲಿ ಸಂತೆಮರಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಎರಡು ಬಾರಿ ಶಾಸಕರಾಗಿ ಮತ್ತು 2023ರಲ್ಲಿ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದಲ್ಲಿ ಮೂರನೇ ಬಾರಿಗೆ ಶಾಸಕರಾಗಿ ಆಯ್ಕೆಗೊಂಡು ಹಲವು ಜನಪರ ಕೆಲಸಗಳನ್ನು ಹಗಲಿರುಳು ಕ್ಷೇತ್ರದ ಜನತೆಯ ಸೇವೆಯನ್ನು ಮಾಡುತ್ತಾ ಬಂದಿರುತ್ತಾರೆ ಹಾಗೂ 2010 ರಿಂದ 2013 ರವರೆಗೆ ಡಾ. ಬಿ ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿ ದಲಿತ ಸಮುದಾಯಕ್ಕೆ ಉತ್ತಮ ಕಾರ್ಯಗಳನ್ನು ನೀಡಿರುತ್ತಾರೆ. ಇವರ ತಂದೆಯವರಾದ ಬಿ.ರಾಚಯ್ಯರವರು ಹಿಮಾಚಲ ಪ್ರದೇಶ, ಕೇರಳ ಮತ್ತು ಗೋವಾ ರಾಜ್ಯಗಳ ರಾಜ್ಯಪಾಲರಾಗಿ ಮತ್ತು ಕರ್ನಾಟಕ ಸರಕಾರದಲ್ಲಿ ಹಲವಾರು ಇಲಾಖೆಯ ಮಂತ್ರಿಗಳಾಗಿ ಸೇವೆ ಸಲ್ಲಿಸಿ ಅಪಾರ ಕೀರ್ತಿ ಹೆಸರನ್ನು ಸಂಪಾದಿಸಿದ್ದಾರೆ. ದಿವಂಗತ ರಾಚಯ್ಯನವರ ಸುಪುತ್ರರಾದ ಶ್ರೀಯುತ ಎ.ಆರ್ ಕೃಷ್ಣಮೂರ್ತಿ ರವರು ದಲಿತ ಪರ ಕಾಳಜಿಯನ್ನು ಇಟ್ಟುಕೊಂಡಿದ್ದು, ಚಾಮರಾಜನಗರ ಜಿಲ್ಲೆಯಲ್ಲಿ ಏಕೈಕ ದಲಿತ ಶಾಸಕರಾಗಿದ್ದು ಸನ್ಮಾನ್ಯರಿಗೆ ದಲಿತ ಕೋಟಾದಲ್ಲಿ ಸಚಿವ ಸ್ಥಾನವನ್ನು ನೀಡಬೇಕೆಂದು ದಲಿತಪರ ಸಂಘಟನೆಗಳು ಅಗ್ರಹಿಸುತ್ತೇವೆ ಎಂದರು.

ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯದಲ್ಲಿ ದಲಿತ ಮುಖ್ಯಮಂತ್ರಿ ಮಾಡುವ ಅವಕಾಶವಿದ್ದರೂ ಕೈಚಲ್ಲಿದ್ದಾರೆ. ಡಾ.ಜಿ.ಪರಮೇಶ್ವರ್ ಅವರನ್ನು ಮುಖ್ಯಮಂತ್ರಿ ಮಾಡಿ, ಸಮುದಾಯಕ್ಕೆ ಸಾಮಾಜಿಕ ನ್ಯಾಯ ಕಲ್ಪಿಸಬಹುದಾಗಿತ್ತು. ಈಗಲಾದರೂ ಸಮುದಾಯಕ್ಕೆ ನ್ಯಾಯ ಕಲ್ಪಿಸುವ ಕೆಲಸವನ್ನು ಮಾಡಬೇಕು ಎಂದು ಅಗಳಕೋಟೆ ನರಸಿಂಹರಾಜು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಅದಲಾಪುರ ಗೋವಿಂದರಾಜು.ಕೆ, ಗ್ರಾ.ಪಂ.ಸದಸ್ಯರಾದ ವಕ್ಕೋಡಿ ಗಿರೀಶ್, ಸೋರೆ ಕುಂಟೆ ಸುರೇಶ್, ಕುಚ್ಚಂಗಿ ಶಿವರಾಜು, ನಿಧಿ ಕುಮಾರ್.ಎನ್.ಕೆ.,ಭೀಮಸಂದ್ರ ನರಸಿಂಹಮೂರ್ತಿ, ತ್ಯಾಗರಾಜು ಮತ್ತಿತರರು ಉಪಸ್ಥಿತರಿದ್ದರು.

# ರಾಹುಲ್ ಗಾಂಧಿಯ ಕಿತಾಪತಿಯಿಂದಾಗಿ ಅಹಿಂದ ನಾಯಕ ಸಿದ್ದರಾಮಯ್ಯ ರಾಜೀನಾಮೆ ನೀಡಿದ್ದಾರೆ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ಕೆಟ್ಟುಹೋದ ಲಾರಿಯಂತಿರುವ ಸರ್ಕಾರವನ್ನು ನಡೆಸಲು ಸಾಧ್ಯವಾಗದೇ ಸಿದ್ದರಾಮಯ್ಯ ಅವರು ಮೌನವಾಗಿ ರಾಜೀನಾಮೆ ಕೊಟ್ಟು ಹೋಗಿದ್ದಾರೆ. ಇನ್ನು ಮುಂದೆ ಡಿ.ಕೆ.ಶಿವಕುಮಾರ್ ಎಲ್ಲ ಬಾಕಿಗಳನ್ನು ತೀರಿಸಬೇಕಿದೆ. ಇದಕ್ಕಾಗಿ ಇನ್ನಷ್ಟು ತೆರಿಗೆಗಳನ್ನು ಅವರು ಜನರ ಮೇಲೆ ಹೇರುತ್ತಾರೆ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಸೋಮವಾರ ವಾಗ್ದಾಳಿ ನಡೆಸಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಇಡೀ ದೇಶದಲ್ಲಿ ನಾನೊಬ್ಬನೇ ಹಿಂದುಳಿದ ಜಾತಿಯ ಮುಖ್ಯಮಂತ್ರಿ, ನಾನೊಬ್ಬನೇ ಅಹಿಂದ ನಾಯಕ, ನನ್ನನ್ನು ಬದಲಾಯಿಸುವುದಿಲ್ಲ ಎಂದುಕೊಂಡಿದ್ದ ಸಿದ್ದರಾಮಯ್ಯ, ರಾಹುಲ್ ಗಾಂಧಿಯ ಕಿತಾಪತಿಯಿಂದಾಗಿ ರಾಜೀನಾಮೆ ನೀಡಿದ್ದಾರೆ.

ಈ ಹಿಂದೆ ಇಂದಿರಾಗಾಂಧಿ ಹಾಗೂ ರಾಜೀವ್‌ಗಾಂಧಿಯವರು ವೀರೇಂದ್ರ ಪಾಟೀಲ್, ದೇವರಾಜು ಅರಸು, ಬಂಗಾರಪ್ಪ ಅವರನ್ನು ಸಿಎಂ ಹುದ್ದೆಯಿಂದ ಕಿತ್ತು ಹಾಕಿದ್ದರು. ಕಾಂಗ್ರೆಸ್ ಪಕ್ಷ ಬ್ಯಾಕ್‌ವರ್ಡ್ ಸಮುದಾಯಕ್ಕೆ ಗೋ ಬ್ಯಾಕ್ ಎನ್ನುತ್ತಿದೆ. ಹಿಂದುಳಿದ ವರ್ಗದ ಪರ ಎಂದು ಹೇಳಿಕೊಳ್ಳುವ ರಾಹುಲ್ ಗಾಂಧಿ ಹಿಂದುಳಿದವರ ವಿರೋಧಿಯಾಗಿದ್ದಾರೆ. ನನಗೆ ಮೂರು ತಿಂಗಳ ಅವಕಾಶ ಕೊಡಿ ಎಂದು ಸಿದ್ದರಾಮಯ್ಯ ಭಿಕ್ಷೆ ಬೇಡಿದ್ದು, ಅಷ್ಟು ಸಮಯವೂ ಕೊಡಲ್ಲ ಎಂದು ಹೈಕಮಾಂಡ್ ಹೇಳಿತ್ತು. ಇನ್ನು ಮುಂದೆ ಕಾಂಗ್ರೆಸ್ ಪಕ್ಷ ಹಿಂದುಳಿದ ವರ್ಗದ ಚಾಂಪಿಯನ್ ಎಂದು ಹೇಳಿಕೊಳ್ಳಬಾರದು. ರಾಜ್ಯದಲ್ಲಿ ಈಗಾಗಲೇ ಕುರುಬ ಸಮುದಾಯ ಕಾಂಗ್ರೆಸ್‌ನ ವಿರುದ್ಧ ತಿರುಗಿ ಬಿದ್ದಿದೆ. 2028 ರ ಚುನಾವಣೆಯಲ್ಲಿ ಜನ ಪಾಠ ಕಲಿಸುತ್ತಾರೆ ಎಂದರು.

ಕಾಂಗ್ರೆಸ್ ಸರ್ಕಾರ ಹಳೆ ಲಾರಿ ಇದ್ದಂತೆ. ಈಗ ಲಾರಿಯ ಚಾಲಕ ಬದಲಾಗಿದ್ದಾನೆಯೇ ಹೊರತು ಲಾರಿ ಬದಲಾಗಿಲ್ಲ. ಈ ಕೆಟ್ಟುಹೋದ ಗಾಡಿಯನ್ನು ಬದಲಿಸಲು ಸಾಧ್ಯವಿಲ್ಲ. ಮಾಜಿ ಸಿಎಂ ಸಿದ್ದರಾಮಯ್ಯ



ಮೂರು ವರ್ಷ ಸಾಲ ಮಾಡಿ ಆಡಳಿತವನ್ನು ಡಿ.ಕೆ.ಶಿವಕುಮಾರ್‌ಗೆ ನೀಡಿದ್ದಾರೆ. ಮುಖ್ಯಮಂತ್ರಿ ಬದಲಾದರೆ ಆರ್ಥಿಕ ಇಲಾಖೆಯ ಲೆಕ್ಕಪತ್ರ ಬದಲಾಗುವುದಿಲ್ಲ. 4 ಲಕ್ಷ ಕೋಟಿ ರೂ. ಗಾತ್ರದ ಬಜೆಟ್ ಇದ್ದರೆ, 7.64 ಲಕ್ಷ ಕೋಟಿ ರೂ. ಸಾಲವಿದೆ. ಈ ವರ್ಷ 94,428 ಕೋಟಿ ರೂ. ಕೊರತೆ ಇದೆ. ಅಭಿವೃದ್ಧಿಗೆ ಹಣವೇ ಇಲ್ಲ ಎಂದರು. ಹಿಂದಿನ ಬಿಜೆಪಿ ಸರ್ಕಾರದಲ್ಲಿ ಅಭಿವೃದ್ಧಿಗಾಗಿ 84,000 ಕೋಟಿ ರೂ. ಖರ್ಚು ಮಾಡಲಾಗುತ್ತಿತ್ತು. ಅವೈಜ್ಞಾನಿಕ ಗ್ಯಾರಂಟಿ ಬಂದ ನಂತರ ಆ ಮೊತ್ತದಲ್ಲಿ ಕಡಿತವಾಗಿದೆ. ಬಿಜೆಪಿ ಇದ್ದಾಗ ಹೆಚ್ಚುವರಿ ಬಜೆಟ್ ಮಂಡನೆಯಾಗಿದ್ದರೆ, ಕಾಂಗ್ರೆಸ್ ಬಂದ ನಂತರ ಕೊರತೆ ಬಜೆಟ್ ಮಂಡಿಸಲಾಯಿತು. ಮೂರು ಬಾರಿ ಸತತವಾಗಿ ಕೊರತೆ ಬಜೆಟ್ ಮಂಡಿಸಲಾಗಿದೆ. ಡಿ.ಕೆ.ಶಿವಕುಮಾರ್ ಹೋಗಿ ಕಾಲಿಗೆ ಬಿದ್ದರೆ ಸಿದ್ದರಾಮಯ್ಯನವರು ಭಸ್ಮಾಸುರ ಆಶೀರ್ವಾದ ಮಾಡಿದ್ದಾರೆ. ಆರ್ಥಿಕ ಸುಸ್ಥಿರತೆ ಇಲ್ಲದ ಆಡಳಿತವನ್ನು ಅವರು ಬಿಟ್ಟು ಹೋಗಿದ್ದಾರೆ. ಅಭಿವೃದ್ಧಿಯ ಕರ್ನಾಟಕ ಈಗ ಸಾಲದ ಕರ್ನಾಟಕ ಆಗಿದೆ ಎಂದರು. ಮೋದಿ ಸರ್ಕಾರ ಸಾಲ ಮಾಡಿದ್ದರೂ ಸುಮಾರು 170 ಲಕ್ಷ ಕೋಟಿ ರೂ. ರೈಲ್ವೆ, ಸೇತುವೆ, ಹೆದ್ದಾರಿಗೆ ಖರ್ಚು ಮಾಡಿದೆ. ಆದರೆ ಕಾಂಗ್ರೆಸ್ ಪ್ರಗತಿಗೆ ಏನೂ ಖರ್ಚು ಮಾಡಿಲ್ಲ. ಗ್ಯಾರಂಟಿಗಾಗಿ 65,000 ಕೋಟಿ ರೂ. ಖರ್ಚು ಮಾಡುವುದನ್ನೇ ದೊಡ್ಡದಾಗಿ ಹೇಳುತ್ತಾರೆ. ಅದರ ಜೊತೆಗೆ 65,000 ಕೋಟಿ ರೂ. ಹೆಚ್ಚುವರಿ ತೆರಿಗೆ ಹಾಕಿದ್ದಾರೆ. ಮಾಡಿರುವ ಸಾಲಕ್ಕೆ ಪ್ರತಿ ವರ್ಷ 38,000 ಕೋಟಿ ರೂ. ಬಡ್ಡಿ ಕಟ್ಟಲಾಗುತ್ತಿದೆ. ಇದೂ ಸೇರಿದರೆ 1.03 ಲಕ್ಷ ಕೋಟಿ ರೂ. ಸಾಲ ಮತ್ತು ಬಡ್ಡಿಗೆ ಹೋಗುತ್ತದೆ ಎಂದರು.

ಕಳೆದೆರಡು ಬಾರಿ ಬೆಳಗಾವಿಯಲ್ಲಿ ಅಧಿವೇಶನ ಮಾಡಿದರೂ ಉತ್ತರ ಕರ್ನಾಟಕದ ಅಭಿವೃದ್ಧಿ ಮಾಡಲು ಸಾಧ್ಯವಾಗಿಲ್ಲ. ಮಾಜಿ ಪ್ರಧಾನಿ ದೇವೇಗೌಡರ ವಿರುದ್ಧ ರೆಬೆಲ್ ಆಗಿದ್ದ ಸಿದ್ದರಾಮಯ್ಯ ಈಗ ಸುಮ್ಮನೆ ಅಧಿಕಾರ ಹಸ್ತಾಂತರಿಸಿದ್ದಾರೆ. ಏಕೆಂದರೆ ಗುತ್ತಿಗೆದಾರರಿಗೆ 38,000 ಕೋಟಿ ರೂ., ಎಸ್ಕಾಂಗಳಿಗೆ 12,500 ಕೋಟಿ ರೂ., ಗೃಹಲಕ್ಷ್ಮಿಗೆ 5,000 ಕೋಟಿ ರೂ., ಶಕ್ತಿ ಯೋಜನೆ 4500 ಕೋಟಿ ರೂ., ಸಾರಿಗೆ ಸಿಬ್ಬಂದಿಗೆ 2,000 ಕೋಟಿ ರೂ., ಅನ್ನಭಾಗ್ಯದ 600 ಕೋಟಿ ರೂ., ಅನಾಥ ಮಕ್ಕಳಿಗೆ 73 ಕೋಟಿ ರೂ., ಭಿಕ್ಷುಕರ ಕಲ್ಯಾಣಕ್ಕೆ 23 ಕೋಟಿ ರೂ. ಸೇರಿದಂತೆ 75,689 ಕೋಟಿ ರೂ. ಬಾಕಿ ನೀಡಬೇಕಿದೆ. ಇದಕ್ಕಾಗಿಯೇ ಸಿದ್ದರಾಮಯ್ಯ ಅಧಿಕಾರವನ್ನು ಬಿಟ್ಟುಕೊಟ್ಟಿದ್ದಾರೆ. ಇಷ್ಟು ಬಾಕಿಯನ್ನು ತೀರಿಸಲು ಡಿ.ಕೆ.ಶಿವಕುಮಾರ್‌ಗೆ ಆಗುವುದಿಲ್ಲ. ಮೌನವಾಗಿ ಅಧಿಕಾರ ನೀಡಿದ ಸಿದ್ದರಾಮಯ್ಯ ಅವರನ್ನು ಎಲ್ಲರೂ ಹೊಗಳಿದ್ದರು. ಆದರೆ ಅದರ ಹಿಂದೆ ಇದೇ ಗುಟ್ಟು ಇದೆ ಎಂದರು.

ಡಿ.ಕೆ.ಶಿವಕುಮಾರ್‌ಗೆ ತೆರಿಗೆ ಕಡಿಮೆ ಮಾಡಲು ಸಾಧ್ಯವಿಲ್ಲ. ಏಕೆಂದರೆ 19,262 ಕೋಟಿ ರೂ. ಕೊರತೆ ಇದೆ. ಆದರೆ ವಾಸ್ತವದಲ್ಲಿ ಇನ್ನಷ್ಟು ಕೊರತೆ ಇದೆ. ಇ–ಖಾತಾದಿಂದಾಗಿ ಆದಾಯ ಇನ್ನಷ್ಟು ಕಡಿಮೆಯಾಗಿದೆ. ಇದನ್ನು ಉಚಿತ ಎನ್ನುತ್ತಾರಾದರೂ ಸಾವಿರಾರು ರೂಪಾಯಿ ಲಂಚ ಪಡೆಯಲಾಗುತ್ತಿದೆ. ಹೊಸ ಮುಖ್ಯಮಂತ್ರಿಯಿಂದ ಜನರಿಗೆ ಯಾವುದೇ ಲಾಭ ದೊರೆಯುವುದಿಲ್ಲ. ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯದ ಬಾಕಿ ಹಣವನ್ನು ನಾನು ಮರಳಿ ಕೊಡಿಸುವುದು ಖಚಿತ. ಇದಕ್ಕಾಗಿ ನಿರಂತರ ಹೋರಾಟ ಮಾಡುತ್ತೇನೆ. ಇದನ್ನು ಬಿಜೆಪಿ ಸವಾಲಾಗಿ ಸ್ವೀಕರಿಸಿದೆ ಎಂದರು.

ಕೇಂದ್ರ ಸರ್ಕಾರ ಕರೆದ ಸಭೆಗಳಿಗೆ ಸಿದ್ದರಾಮಯ್ಯ ಹೋಗಿರಲಿಲ್ಲ. ಆದರೆ ಮಗನಿಗೆ ಅಧಿಕಾರ ಬೇಕೆಂದಾಗ ಮಾತ್ರ ಹೈಕಮಾಂಡ್ ಬಳಿ ಹೋಗಿದ್ದಾರೆ. ಈ ಮೂರು ವರ್ಷಗಳಲ್ಲಿ ಅವರು ಕೇಂದ್ರದ ಮೇಲೆ ಆರೋಪ ಮಾಡುವುದು ಬಿಟ್ಟು ಬೇರೇನೂ ಮಾಡಿಲ್ಲ. ಸಿದ್ದರಾಮಯ್ಯನವರ ಗ್ಯಾಂಗ್ ಅನ್ನು ಹತ್ತಿಕ್ಕಲು ಕಾಂಗ್ರೆಸ್‌ನ ಒಂದು ತಂಡ ಪ್ರಯತ್ನ ಮಾಡುತ್ತಿದೆ. ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಹೊರತುಪಡಿಸಿ ಹೊಸ ತಂಡವೂ ಸೃಷ್ಟಿಯಾಗಲಿದೆ. ಪ್ರಮಾಣವಚನ ಸ್ವೀಕಾರ ನಂತರ ಮತ್ತೆ ಗಲಾಟೆ ಶುರುವಾಗಲಿದೆ ಎಂದರು.

ಸಿದ್ದರಾಮಯ್ಯ ಮನೆ ಬಿಡಲ್ಲ, ಡಿ.ಕೆ.ಶಿವಕುಮಾರ್ ನನಗೆ ಮನೆ ಕೊಡಲ್ಲ ಎಂಬಂತಾಗಿದೆ. ಇವರಿಬ್ಬರ ನಡುವಿನ ಸಂಘರ್ಷ ಇನ್ನೂ ಇರುತ್ತದೆ. ನಾನೇನೂ ಇದರ ಬಗ್ಗೆ ಅಪೇಕ್ಷೆ ಇಟ್ಟುಕೊಂಡಿಲ್ಲ. ಬಿಜೆಪಿ ಅವಧಿಯಲ್ಲಿ ಪ್ರತಿಪಕ್ಷ ನಾಯಕರಿಗೆ ಮನೆ ಕೊಟ್ಟಿದ್ದೇವೆ. ಮುಂದೆ ಬಿಜೆಪಿ ಅಧಿಕಾರಕ್ಕೆ ಬಂದಾಗ ಅದೇ ದಾರಿಯನ್ನು ಪಾಲಿಸುತ್ತೇವೆ. ನಾನು ಸರ್ಕಾರದಿಂದ ಮನೆ ಬಾಡಿಗೆ ಪಡೆಯುತ್ತಿಲ್ಲ. ಹಣ ಕೊರತೆ ಇರುವ ಕಡೆ ಆ ಹಣವನ್ನು ಸರ್ಕಾರ ಬಳಸಿಕೊಳ್ಳಲಿ ಎಂದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನು ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ‘ಉತ್ತಮ ಭವಿಷ್ಯಕ್ಕಾಗಿ ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ’ ಶಾಲಾ ಪ್ರಾರಂಭೋತ್ಸವ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಖಾಸಗಿ ಶಾಲೆಯ ವ್ಯಾಮೋಹ ಬಿಟ್ಟು ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗೆ ದಾಖಲು ಮಾಡಿ, ತುಮಕೂರು ಗ್ರಾಮಾಂತರ ಕ್ಷೇತ್ರದ ಸರ್ಕಾರಿ ಶಾಲೆಗಳಲ್ಲಿ ಆಧುನಿಕ ಸೌಲಭ್ಯ ಒದಗಿಸಲಾಗಿದೆ. ಉತ್ತಮ ಶಿಕ್ಷಕರ ಬೋಧನಾ ವ್ಯವಸ್ಥೆ, ಪಠ್ಯೇತರ ಚಟುವಟಿಕೆಗಳಿಗೆ ಒಳ್ಳೆಯ ವಾತಾವರಣದ ಅನುಕೂಲ ಮಾಡಲಾಗಿದೆ ಎಂದು ಕ್ಷೇತ್ರದ ಶಾಸಕ ಬಿ. ಸುರೇಶ್‌ಗೌಡರು ಮನವಿ ಮಾಡಿದರು.

ನೂತನ ಶೈಕ್ಷಣಿಕ ವರ್ಷದ ಶಾಲಾ ಪ್ರಾರಂಭೋತ್ಸವದ ಅಂಗವಾಗಿ ಸೋಮವಾರ ಗ್ರಾಮಾಂತರ ಕ್ಷೇತ್ರದ ವಿವಿಧ ಶಾಲೆಗಳ ಕಾರ್ಯಕ್ರಮಗಳಲ್ಲಿ ಶಾಸಕರು ಭಾಗವಹಿಸಿದ್ದರು. ಇದೇವೇಳೆ ನಾಗವಲ್ಲಿಯ ಪಬ್ಲಿಕ್ ಶಾಲೆ ಪ್ರಾರಂಭೋತ್ಸವ ಸಮಾರಂಭದಲ್ಲಿ ಮಾತನಾಡಿ, ಸರ್ಕಾರಿ ಶಾಲೆಗೆ ಬಡ ಕುಟುಂಬದ ಮಕ್ಕಳೇ ಸೇರುತ್ತಾರೆ. ಇಂತಹ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಅವರ ಬದುಕು ರೂಪಿಸಬೇಕಾದ ಜವಾಬ್ದಾರಿ ಇದೆ. ಈ ಕಾರಣದಿಂದ ಸರ್ಕಾರಿ ಶಾಲೆಗಳನ್ನು ಸಸಜ್ಜಿತವಾಗಿ, ಆಧುನಿಕ ಸೌಕರ್ಯಗಳೊಂದಿಗೆ ಅಭಿವೃದ್ಧಿಪಡಿಸಲಾಗುತ್ತಿದೆ ಎಂದರು.

ಮಾದರಿ ಶಾಲೆಯಾಗಿ ರೂಪುಗೊಂಡಿರುವ ನಾಗವಲ್ಲಿ ಶಾಲೆಯ ಅಭಿವೃದ್ಧಿ ಹಾಗೂ ಮೂಲಭೂತ ಸೌಲಭ್ಯಕ್ಕಾಗಿ ಒತ್ತು ನೀಡಿ ಖಾಸಗಿ ಕಂಪನಿಗಳ ಸಿಎಸ್‌ಆರ್ ನಿಧಿ ಬಳಕೆ ಮಾಡಿಕೊಂಡು ಏಳು ಕೋಟಿ ರೂ. ಖರ್ಚು ಮಾಡಿ ಸಕಲ ಸೌಲಭ್ಯ ನೀಡಲಾಗುತ್ತಿದೆ. 16 ಹೊಸ ಕೊಠಡಿಗಳನ್ನು ನಿರ್ಮಿಸಲಾಗಿದೆ. ಪ್ರತಿ ಕೊಠಡಿಯಲ್ಲೂ ಶೈಕ್ಷಣಿಕ ಸವಲತ್ತುಗಳನ್ನು ಒದಗಿಸಲಾಗಿದೆ. ವಿಷಯವಾರು ಗ್ರಂಥಾಲಯ, ಕಂಪ್ಯೂಟರ್ ಲ್ಯಾಬ್ ಸೇರಿದಂತೆ ಯಾವುದೇ ಹೈಟೆಕ್ ಶಾಲೆಗೂ ಕಡಿಮೆ ಇಲ್ಲದಂತಹ ಅನುಕೂಲ ಮಾಡಲಾಗಿದೆ. ಜೊತೆಗೆ ಉತ್ತಮ ಶಿಕ್ಷಕರ ಬಳಗ ಶಾಲೆಯಲ್ಲಿದೆ ಎಂದು ಸುರೇಶ್‌ಗವಡರು ಹೇಳಿದರು.

ಸರ್ಕಾರಿ ಶಾಲೆಯಲ್ಲಿ ಕಲಿತ ಅನೇಕರು ಉನ್ನತ ಸ್ಥಾನಕ್ಕೇರಿ ಉತ್ತಮ ಸಾಧನೆ ಮಾಡಿದ್ದಾರೆ. ಮಕ್ಕಳ ಬದುಕನ್ನು ಸರ್ವತೋಮುಖವಾಗಿ ಕಟ್ಟಿಕೊಡುವ ಶಕ್ತಿ ಸರ್ಕಾರಿ ಶಾಲೆಗಿದೆ ಎಂಬುದನ್ನು ಪೋಷಕರು ಮನವರಿಕೆ ಮಾಡಿಕೊಳ್ಳಬೇಕು. ಶಾಲೆಯ ಶಿಕ್ಷಣ ಪಠ್ಯ ಬೋಧನೆ, ಅಂಕ ಗಳಿಕೆಗೆ ಸೀಮಿತವಾಗಬಾರದು. ಮಕ್ಕಳಲ್ಲಿ ಸಂಸ್ಕಾರ, ಆತ್ಮವಿಶ್ವಾಸ ಬೆಳೆಸಬೇಕು. ತಂದೆತಾಯಿ, ಗುರುಹಿರಿಯರನ್ನು ಗೌರವಿಸುವ, ದೇಶಾಭಿಮಾನ ಮೂಡಿಸುವ ಸತ್ಪ್ರಜೆಗಳನ್ನಾಗಿ ರೂಪಿಸಬೇಕು ಎಂದು ಸುರೇಶ್‌ಗೌಡರು ಸಲಹೆ ಮಾಡಿದರು.

ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ವಿ. ಅಶ್ವಿಜ ಮಾತನಾಡಿ, ಶಿಕ್ಷಣದಿಂದ ಮಕ್ಕಳ ಬದುಕು, ಭವಿಷ್ಯ ಬದಲಾಗುತ್ತದೆ. ಶಾಲಾ ಶಿಕ್ಷಕರ ಜವಾಬ್ದಾರಿ ದೊಡ್ಡದು, ಮಕ್ಕಳಲ್ಲಿರುವ ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸ ಮಾಡಬೇಕು. ಮಕ್ಕಳು ಕೇವಲ ಪಠ್ಯ ಅಧ್ಯಯನಕ್ಕೆ ಸೀಮಿತವಾಗದೆ ಕಲೆ, ಕ್ರೀಡೆಯಂತಹ ಪಠ್ಯೇತರ ಚಟುವಟಿಕೆಗಳನ್ನು ಕಲಿಸಬೇಕು ಎಂದರು.

ಮಕ್ಕಳು ತಾವು ಮುಂದೆ ಏನಾಗಬೇಕು ಎಂದು ಕನಸು ಕಾಣಬೇಕು. ಆ ಕನಸನ್ನು ನನಸು ಮಾಡಿಕೊಳ್ಳಲು ಸರಿಯಾದ ಮಾರ್ಗ ಅನುಸರಿಸಿ ಶಿಸ್ತು, ಶ್ರದ್ಧೆಯಿಂದ ಕಲಿತರೆ ಸಾಧನೆ ಮಾಡಿ ಗುರಿ ತಲುಪಬಹುದು. ಶಿಕ್ಷಕರು ಮಕ್ಕಳಿಗೆ ಸರಿಯಾದ ಮಾರ್ಗದರ್ಶನ ನೀಡಬೇಕು ಎಂದು ಹೇಳಿದರು.

ಡಿಡಿಪಿಐ ರಘುಚಂದ್ರ ಅವರೊಂದಿಗೆ ಶಾಲೆಯ ಶಿಕ್ಷಕರು, ಪೋಷಕರು, ಗ್ರಾಮದ ಮುಖಂಡರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಶಾಸಕ ಸುರೇಶ್‌ಗೌಡರು ಸೋಮವಾರ ನಾಗವಲ್ಲಿ, ಗೂಳೂರು, ಹೊನ್ನುಡಿಕೆ, ಬೆಳ್ಳಾವಿ ಮತ್ತಿತರ ಶಾಲೆಗಳ ಪ್ರಾರಂಭೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

# ನೀಟ್ ಪರೀಕ್ಷೆ ನಡೆಸುವಲ್ಲಿ ವಿಫಲವಾಗಿರುವ ಕೇಂದ್ರ ಸರಕಾರದ ವಿರುದ್ದ ಜೂನ್ 02: ಬೃಹತ್ ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನೀಟ್ ಪರೀಕ್ಷೆ ನಡೆಸುವಲ್ಲಿ ವಿಫಲವಾಗಿರುವ ಕೇಂದ್ರ ಸರಕಾರದ ವಿರುದ್ಧ ಜೂನ್ 02 ರ ಮಂಗಳವಾರ ಬೆಳಗ್ಗೆ 10–30ಕ್ಕೆ ನಗರದ ಟೌನ್‌ಹಾಲ್ ವೃತ್ತದಲ್ಲಿ ಎನ್.ಎಸ್.ಯು.ಐ ಹಾಗೂ ಯೂತ್ ಕಾಂಗ್ರೆಸ್ ವತಿಯಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಕೆಪಿಸಿಸಿ ಉಪಾಧ್ಯಕ್ಷರಾದ ಮುರುಳೀಧರ ಹಾಲಪ್ಪ ತಿಳಿಸಿದ್ದಾರೆ.

ನಗರದ ಖಾಸಗಿ ಹೋಟೇಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಕಳೆದ 2017 ರಿಂದ ಇದುವರೆಗೂ ಹಲವು ಬಾರಿ ಎನ್.ಟಿ.ಎ ನೀಟ್,ಎಸ್.ಎಸ್.ಸಿ ಹಾಗೂ ಯುಜಿ ಪ್ರವೇಶ ಪರೀಕ್ಷೆಯನ್ನು ಸಮರ್ಥವಾಗಿ ನಡೆಸಲು ಸಂಪೂರ್ಣ ವಿಫಲವಾಗಿದೆ.ಇದರ ಹೊಣೆ ಹೊರಬೇಕಾದ ಶಿಕ್ಷಣ ಸಚಿವರು ಇದುವರೆಗೂ ಮೌನಕ್ಕೆ ಶರಣಾಗಿದ್ದಾರೆ.ಶಿಕ್ಷಣ ಸಚಿವರ ರಾಜೀನಾಮೆ ಪಡೆಯಬೇಕಾಗಿದ್ದ ಪ್ರಧಾನಮಂತ್ರಿಗಳು ವಿದೇಶಿ ಪ್ರವಾಸದಲ್ಲಿ ಬ್ಯುಸಿಯಾಗಿದ್ದು, ದೇಶದ ಯುವಜನರನ್ನು ವಂಚಿಸುತಿದ್ದಾರೆ. ಆಂಧ್ರ ಮತ್ತು ತೆಲಂಗಾಣ ರಾಜ್ಯದಲ್ಲಿ ಬ್ಲಾಕ್‌ಲೀಸ್ಟ್‌ನಲ್ಲಿ ಇದ್ದ ಕಂಪನಿಗಳಿಗೆ ಪರೀಕ್ಷೆ ನಡೆಸುವ ಜವಾಬ್ದಾರಿ ನೀಡಿ, ಇಡೀ ವ್ಯವಸ್ಥೆಯನ್ನು ಹಾಳು ಮಾಡಿದೆ.ಹಾಗಾಗಿ ಶಿಕ್ಷಣ ಮಂತ್ರಿ ಧರ್ಮೇಂದ್ರ ಪ್ರಧಾನ ಅವರ ರಾಜೀನಾಮೆಗೆ ಒತ್ತಾಯಿಸಿ ಹಾಗೂ ಜನಸಾಮಾನ್ಯರ ಸಮಸ್ಯೆಗಳಾದ ಬೆಲೆ ಹೆಚ್ಚಳವನ್ನು ವಿರೋಧಿಸಿ ಜೂನ್ 02ರಂದು ಎನ್.ಎಸ್.ಯು.ಐ ಮತ್ತು ಯೂತ್ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.



ಕೇಂದ್ರ ಸರಕಾರದ ನಿರ್ಲಕ್ಷ್ಯದಿಂದ ರೋಸಿ ಹೋಗಿರುವ ಯುವಜನರ ತಾಳ್ಮೆಯ ಕಟ್ಟೆ ಒಡೆದಿದೆ.ಹಾಗಾಗಿ ಕಾಕ್‌ರೋಚ್ ಜನತಾಪಾರ್ಟಿ ಎಂಬ ಸಾಮಾಜಿಕ ಜಾಲತಾಣದ ಗ್ರೂಪ್‌ಗೆ 21 ಲಕ್ಷಕ್ಕೂ ಅಧಿಕ ಯುವ ಜನರು ತಮ್ಮ ಬೆಂಬಲ ಸೂಚಿಸುವ ಮೂಲಕ ತಮ್ಮ ಆಕ್ರೋಶವನ್ನು ಹೊರ ಹಾಕಿದ್ದಾರೆ.ಆದರೆ ಇದರಿಂದ ಎಚ್ಚೆತ್ತಂತೆ ಕೇಂದ್ರ ಸರಕಾರ ಕಂಡು ಬರುತ್ತಿಲ್ಲ.ಇಂದಿಗೂ ನೀಟ್,ಎಸ್.ಎಸ್.ಸಿ ಹಾಗೂ ಯುಜಿ ಪ್ರವೇಶ ವೈಫಲ್ಯವನ್ನು ಜಾತಿ,ಧರ್ಮದ ಆಧಾರದಲ್ಲಿಯೇ ಸಮರ್ಥಿಸಿಕೊಳ್ಳಲು ಮುಂದಾಗಿರುವುದು ನಾಚಿಕೆಗೇಡು.ಕೇಂದ್ರದ ಈ ಯುವಜನ ವಿರೋಧಿ ಧೋರಣೆಯನ್ನು ಜನರ ಮುಂದಿಡುವ ನಿಟ್ಟಿನಲ್ಲಿ ಈ ಪ್ರತಿಭಟನೆ ಮಹತ್ವದ ಪಾತ್ರ ವಹಿಸಲಿದೆ ಎಂದು ಮುರುಳೀಧರ ಹಾಲಪ್ಪ ನುಡಿದರು.

ಹಿರಿಯ ಮುಖಂಡರಾದ ಕೆಂಚಮಾರಯ್ಯ ಮಾತನಾಡಿ,ನೀಟ್ ಹಗರಣದಿಂದಾಗಿ ಯುವಜನರ ಆತ್ಮಸ್ಥೈರ್ಯವೇ ಕುಸಿದಿದೆ. ನೀಟ್ ಪರೀಕ್ಷೆ ಬರೆದ 23 ಲಕ್ಷ ವಿದ್ಯಾರ್ಥಿಗಳಲ್ಲಿ ಅಭದ್ರತೆ ಕಾಡುತ್ತಿದೆ. ಇದಕ್ಕೆ ಕೇಂದ್ರ ಸರಕಾರವೇ ನೇರ ಹೊಣೆ.ಆದ್ದರಿಂದ ಕೇಂದ್ರದ ಶಿಕ್ಷಣ ಸಚಿವರಾದ ಧರ್ಮೇಂದ್ರ ಪ್ರಧಾನ ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂಬುದು ನಮ್ಮ ಆಗ್ರಹವಾಗಿದೆ.ಈ ನಿಟ್ಟಿನಲ್ಲಿ ಎನ್.ಎಸ್.ಯು.ಐ ಸಕ್ರಿಯವಾಗಿ ಪ್ರತಿಭಟನೆಯಲ್ಲಿ ತೊಡಗಿಕೊಂಡು, ದೇಶದ ಯುವ ಜನರಿಗೆ ಮಾರಕವಾಗಿರುವ ಕೇಂದ್ರದ ನಡೆಯ ವಿರುದ್ಧ ದೊಡ್ಡ ಹೋರಾಟ ನಡೆಸಲು ಮುಂದಾಗಿದ್ದಾರೆ.ಯುವಜನರ ಈ ಹೋರಾಟಕ್ಕೆ ಕಾಂಗ್ರೆಸ್ ಬೆಂಬಲಿಸಲಿದೆ ಎಂದರು.

ಹಿರಿಯರಾದ ರೇವಣ್ಣ ಸಿದ್ದಯ್ಯ ಮಾತನಾಡಿ,ಇಂದಿನ ಯುವಜನರಲ್ಲಿ ಸಾಮಾಜಿಕ ಕಾಳಜಿ ಎಂಬುದೇ ಇಲ್ಲದಾಗಿದೆ. ಉದ್ಯೋಗವಿಲ್ಲದೆ ಬಳಲುತ್ತಿರುವ ಯುವಜನತೆ,ಒಂದು ಪರೀಕ್ಷೆಯನ್ನು ಸಮರ್ಥವಾಗಿ ನಡೆಸಲಾಗದ ಕೇಂದ್ರದ ವಿರುದ್ದ ದ್ವನಿ ಎತ್ತಬೇಕಾಗಿದೆ.ಬಡತನ,ನಿರುದ್ಯೋಗ, ಬೆಲೆ ಹೆಚ್ಚಳದ ವಿರುದ್ದದ ಈ ಹೋರಾಟ ಇತರರಿಗೆ ಮಾದರಿಯಾಗಬೇಕು ಎಂದರು.

ಯುವ ಜನ ಮುಖಂಡ ಪ್ರಕಾಶ್ ಮಾತನಾಡಿ,ದೇಶದ ಜನರು ಎದುರಿಸುತ್ತಿರುವ ನಿರುದ್ಯೋಗ, ಬಡತನ ಇನ್ನಿತರ ವಿಷಯಗಳ ಕಡೆಯಿಂದ ಜನರ ಮನಸ್ಸನ್ನು ಬೇರೆಡೆಗೆ ಸೆಳೆಯಲು ಮತ್ತು ಬಿಜೆಪಿಯೇತರ ಮತದಾರರನ್ನು ಮತದಾರರ ಪಟ್ಟಿಯಿಂದ ಹೊರಗಿಡಲು ಎಸ್.ಐ.ಆರ್. ನಡೆಸುತ್ತಿದೆ.ಸಾಮಾಜಿಕ ಮಾಧ್ಯಮಗಳಲ್ಲಿ ಪ್ರತಿಯೊಂದು ಸಮಸ್ಯೆಯನ್ನು ಧರ್ಮ,ಜಾತಿ ಆಧಾರದಲ್ಲಿ ಬಿಂಬಿಸುವ ಕೆಲಸ ನಡೆಯುತ್ತಿದೆ.ಇದರ ವಿರುದ್ದ ನಾವೆಲ್ಲರೂ ಎಚ್ಚೆತ್ತುಕೊಳ್ಳಬೇಕಿದೆ.ಸೋಷಿಯಲ್ ಮೀಡಿಯಾ ದಲ್ಲಿ ಒಂದು ಕಾಮೆಂಟ್ ಹಾಕುವ ಮೊದಲು ಹತ್ತಾರು ಬಾರಿ ಪರಿಶೀಲಿಸಿ ಮುನ್ನೆಡೆಯಬೇಕೆಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಜಿ.ಚಂದ್ರಶೇಖರಗೌಡ ಮಾತನಾಡಿ,ಎನ್.ಎಸ್.ಯು.ಐ ಎಂಬುದು ಒಂದು ಪ್ರಬಲವಾದ ಸಂಘಟನೆ, ಆದರೆ ಇತ್ತೀಚಿನ ದಿನಗಳಲ್ಲಿ ಯುವಜನರು ಇದರಿಂದ ವಿಮುಖರಾಗಿ ದೇಶದ ಸಮಸ್ಯೆಗಳ ಕಡೆಗೆ ಗಮನಹರಿಸುತ್ತಿಲ್ಲ. ಹಾಗಾಗಿ ದೇಶದ ಜಲ್ವಂತ ಸಮಸ್ಯೆಗಳ ಬಗ್ಗೆ ಯುವಜನರನ್ನು ಸೆಳೆಯುವ ನಿಟ್ಟಿನಲ್ಲಿ ಯುವ ಕಾಂಗ್ರೆಸ್ ಮತ್ತು ಎನ್.ಎಸ್.ಯು.ಐ ನಡೆಸುವ ಈ ಹೋರಾಟದಲ್ಲಿ ನಾವೆಲ್ಲರೂ ಭಾಗವಹಿಸುವ ಮೂಲಕ ನೈತಿಕ ಸ್ಥೈಯ ತುಂಬುವ ಕೆಲಸ ಮಾಡಲಿದ್ದೇವೆ ಎಂದರು.

ಸಭೆಯಲ್ಲಿ ಮುಖಂಡರುಗಳಾದ ಗೋವಿಂದೇಗೌಡ, ರೈತ ಸಂಘದ ರಾಚಪ್ಪ,ರಾಜಣ್ಣ,ಎನ್.ಎಸ್.ಯು.ಐನ ಮಹಮದ್ ಕೈಫ್,ಜೈನ್, ಮನೋಹರ್, ಗಗನದೀಪ್, ಗಗನ್ ಶ್ರೀನಿವಾಸ್, ಅರುಣ್‌ಕುಮಾರ್, ದೇವರಾಜು,ಕುಶಾಲ್,ದಿಲೀಪ್ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ಸ್ವಾತಂತ್ರ್ಯ ಹೋರಾಟಗಾರರಾದ ಟಿ. ಆರ್. ರೇವಣ್ಣ ಸೇರಿದಂತೆ ಮೂವರಿಗೆ ಗೌರವ ಡಾಕ್ಟರೇಟ್

ಸೂರ್ಯಪ್ರಗತಿನ್ಯೂಸ್.ಕಾಂ

ಟಿ.ಆರ್. ರೇವಣ್ಣ ಭಾರತದ ಸ್ವಾತಂತ್ರ್ಯಸಂಗ್ರಾಮಕ್ಕೆ ತಮ್ಮನ್ನು ತಾವು ತೇಯ್ದುಕೊಂಡ ತುಮಕೂರಿನ ಹೆಮ್ಮೆಯ ಪುತ್ರ. 1928ರಲ್ಲಿ ಜಿ.ಎಂ. ರಾಜಪ್ಪ ಮತ್ತು ಹನುಮಕ್ಕನವರ ಮಗನಾಗಿ ಜನಿಸಿದ ಇವರು ವಿದ್ಯಾರ್ಥಿ ದೆಸೆಯಲ್ಲೇ ಭಾರತದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೈಲುವಾಸವನ್ನು ಅನುಭವಿಸಿದರು. 1947 ರ ಮೈಸೂರು ಚಲೋ ಚಳವಳಿ, ಸ್ವಾತಂತ್ರ್ಯ ನಂತರದ ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಸಹ ಸಕ್ರಿಯವಾಗಿ ಭಾಗವಹಿಸಿದವರು ಶ್ರೀಯುತರು ಪ್ರಸಿದ್ಧ ಸ್ವಾತಂತ್ರ್ಯಹೋರಾಟಗಾರ್ತಿ ಶ್ರೀಮತಿ ಅರುಣಾ ಅಸಫ್ ಅಲಿ ಅವರನ್ನು 1964ರಲ್ಲಿ ತುಮಕೂರಿಗೆ ಕರೆಸಿ ರಾಜ್ಯದ ಶಾಂತಿ ಹಾಗೂ ಸೌಹಾರ್ದತಾ ಸಂಘಟನೆಯ ಸಮ್ಮೇಳನವನ್ನು ಏರ್ಪಡಿಸಿರುತ್ತಾರೆ. 1973ರಲ್ಲಿ ಮಾಸ್ಕೋದಲ್ಲಿ ನಡೆದ ವಿಶ್ವಶಾಂತಿ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾಗಿ ಭಾಗವಹಿಸಿ, ಈ ನೆಲದ ಗರಿಮೆಯನ್ನು ಎತ್ತರಕ್ಕೆ ಏರಿಸಿದ್ದಾರೆ. ಯುದ್ಧವಿರೋಧಿ ನಿಶ್ಶಸ್ತ್ರೀಕರಣ, ಕೋಮುಸೌಹಾರ್ದತೆ, ರಾಷ್ಟ್ರೀಯ ಐಕ್ಯತೆಗೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮಗಳಲ್ಲಿ ನಿರಂತರವಾಗಿ ಕ್ರಿಯಾಶೀಲರಾಗಿದ್ದಾರೆ.

ಗಾಂಧೀಜಿಯ ಆದರ್ಶಗಳ ದಾರಿಯಲ್ಲಿ ನಡೆದಿರುವ ರೇವಣ್ಣನವರು ಸಮುದಾಯದ ಶ್ರೇಯೋಭಿವೃದ್ಧಿಯ ಕಾರ್ಯಕ್ರಮಗಳಾದ ಆರೋಗ್ಯ ಶಿಬಿರ, ನೇತ್ರ ತಪಾಸಣಾ ಶಿಬಿರ, ಕೊಳಚೆ ಪ್ರದೇಶಗಳ ನೈರ್ಮಲ್ಯ, ಅಣುಬಾಂಬ್ ದುರಂತದ ಖಂಡನಾ ಸಮಾರಂಭ, ವರದಕ್ಷಿಣೆ ವಿರೋಧಿ ಚಳುವಳಿ, ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ, ಮೊದಲಾದವುಗಳ ಮೂಲಕ ಉತ್ಕೃಷ್ಟ ಸಮಾಜ



ನಿರ್ಮಾಣದ ಕನಸನ್ನು ಸಾಕಾರಗೊಳಿಸಲು ಶ್ರಮಿಸಿರುತ್ತಾರೆ.

2002ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ, 2017ರಲ್ಲಿ ಭಾರತದ ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿಯವರಿಂದ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿದ್ದಕ್ಕೆ ಅಭಿನಂದನೆ, 2011 ರಲ್ಲಿ ಕರ್ನಾಟಕ ಗಾಂಧಿ ಸ್ಮಾರಕನಿಧಿ, ಗಾಂಧಿಭವನ, ಬೆಂಗಳೂರು ಇಲ್ಲಿ ರಾಜ್ಯಪಾಲರಿಂದ ಗೌರವ ಸಮರ್ಪಣೆ ಹೀಗೆ ಇವರಿಗೆ ಸಂದ ಪ್ರಶಸ್ತಿ ಗೌರವಗಳು ಹತ್ತು–ಹಲವು.

ಚಾರ್ಟರ್ಡ್ ಅಕೌಂಟೆಂಟ್ ಮತ್ತು ಪ್ರಸಿದ್ಧ ವಕೀಲರು ಕೆ. ಆರ್. ಪ್ರದೀಪ್ :

ಕೆ. ಆರ್. ಪ್ರದೀಪ್ ಇವರು ಕಾನೂನು ತಜ್ಞರಾಗಿ, ಹಣಕಾಸು ತಜ್ಞರಾಗಿ, ಹಸಿರು ಇಂಧನ ಉದ್ಯಮಿಯಾಗಿ ಹಾಗೂ ಸಮಾಜ ಸೇವಕರಾಗಿ ಭಾರತ ಮತ್ತು ವಿದೇಶಗಳಲ್ಲಿ ವಿಶಿಷ್ಟ ಛಾಪನ್ನು ಮೂಡಿಸಿದ ಬಹುಮುಖ ಪ್ರತಿಭೆಯಾಗಿದ್ದಾರೆ. ಇವರು ಫೈನಲ್ ಸಿ.ಎ. ಪರೀಕ್ಷೆಯ ‘ಅಡ್ವಾನ್ಸ್ಡ್ ಅಕೌಂಟೆನ್ಸಿ’ ವಿಷಯದಲ್ಲಿ ಶೇಕಡಾ 100 ಕ್ಕೆ 100 ಅಂಕಗಳನ್ನು ಪಡೆದು ಪ್ರಥಮ ಸ್ಥಾನ ಗಳಿಸಿದ್ದಕ್ಕಾಗಿ ರಾಷ್ಟ್ರಪತಿಗಳ ಸನ್ಮಾನಕ್ಕೆ ಪಾತ್ರರಾಗಿದ್ದಾರೆ. 1949 ರಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಸ್ಥಾಪನೆಯಾದಾಗಿನಿಂದ ಈವರೆಗೂ ಯಾರೂ ಮಾಡದ ಐತಿಹಾಸಿಕ ಸಾಧನೆ ಇದಾಗಿದೆ. ಇವರು ಕರ್ನಾಟಕದ ಅತ್ಯುನ್ನತ ವೃತ್ತಿಪರ ತೆರಿಗೆದಾರರಲ್ಲಿ ಒಬ್ಬರಾಗಿದ್ದು, ಸರ್ಕಾರದ ಬೊಕ್ಕಸಕ್ಕೆ 250 ಕೋಟಿ ರೂಪಾಯಿಗಳಿಗೂ ಹೆಚ್ಚು ಕೊಡುಗೆ ನೀಡಿದ್ದಾರೆ.

ಪ್ರದೀಪ್ ಅವರು ಕರ್ನಾಟಕದಲ್ಲಿ ಮೂರು ಪ್ರಮುಖ ಜಲವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಿದ್ದು, ಇವು 5 ಲಕ್ಷ ಮನೆಗಳಿಗೆ ವಾರ್ಷಿಕವಾಗಿ 120 ಮಿಲಿಯನ್ ಯೂನಿಟ್‌ಗಳಿಗಿಂತ ಹೆಚ್ಚು ನವೀಕರಿಸಬಹುದಾದ ವಿದ್ಯುತ್ತನ್ನು ಉತ್ಪಾದಿಸುತ್ತವೆ. ಪ್ರದೀಪ್ ಅವರು ಪ್ರತಿಷ್ಠಿತ ವಾಸವಿ ರತ್ನ ಪುರಸ್ಕಾರಕ್ಕೆ ಪಾತ್ರರಾಗಿದ್ದಾರೆ. ವಾಸವಿ ಆಸ್ಪತ್ರೆ, ಲಯನ್ಸ್ ಕಣ್ಣಿನ ಆಸ್ಪತ್ರೆ ಮತ್ತು ಅರಣ್ಯವಾಸಿ ಸಿದ್ದಿ ಸಮುದಾಯದ ಅಭಿವೃದ್ಧಿಗಾಗಿ ಅವರು ಪ್ರಾಯೋಜಕತ್ವವನ್ನು ನೀಡಿದ್ದಾರೆ. ರೂ. 9 ಕೋಟಿಗೂ ಹೆಚ್ಚು ಮೊತ್ತದ ವಿದ್ಯಾರ್ಥಿವೇತನವನ್ನು ನೀಡಿದ ಹೆಗ್ಗಳಿಕೆ ಹೊಂದಿದ್ದಾರೆ.

ಕವಿ ಮತ್ತು ಚಿಂತಕರು ದ್ವಾರನಕುಂಟೆ ಪಾತಣ್ಣ :

ಕಳೆದ ನಲವತ್ತು ವರ್ಷಗಳಿಂದ ಕನ್ನಡ ಪರ ಚಿಂತನೆ ಮತ್ತು ಹೋರಾಟದ ವಲಯದಲ್ಲಿ ಶ್ರೀ ದ್ವಾರನಕುಂಟೆ ಪಾತಣ್ಣನವರ ಹೆಸರು ಪ್ರಸಿದ್ಧವಾಗಿದೆ. 1951ರಲ್ಲಿ ಸಿರಾ ತಾಲೂಕಿನ ದ್ವಾರನಕುಂಟೆ ಗ್ರಾಮದಲ್ಲಿ ಜನಿಸಿ ಪರಿಶ್ರಮದ ಓದಿನ ಮೂಲಕ ಎಚ್.ಎಂ.ಟಿ. ಕಾರ್ಖಾನೆಯಲ್ಲಿ ಉದ್ಯೋಗ ಪಡೆದು, ಕನ್ನಡದ ಸೇವೆಗಾಗಿ ತಮ್ಮ ಬಾಳನ್ನು ಅರ್ಪಿಸಿಕೊಂಡವರು ಪಾತಣ್ಣ.

ಶ್ರೀಯುತರ ಲೇಖನಿಯಿಂದ ಹೊಮ್ಮಿದ ಬರವಣಿಗೆ ಸತ್ವಯುತ ಮತ್ತು ವೈವಿಧ್ಯಮಯ. ಸಾಮಾಜಿಕ, ಐತಿಹಾಸಿಕ ಕಾದಂಬರಿಗಳು, ಸಣ್ಣಕಥೆ, ಕವನಗಳು, ನಾಟಕ, ಆತ್ಮಕಥೆ ಹೀಗೆ ಅವರ ಸಾಹಿತ್ಯಕೃಷಿ ವಿವಿಧ ಶಾಖೆಗಳಲ್ಲಿ ಸಮೃದ್ಧವಾಗಿ ಬೆಳೆದುಬಂದಿದೆ. ಇದುವರೆಗೆ ಪ್ರಕಟವಾದ ಅವರ ಕೃತಿಗಳ ಸಂಖ್ಯೆ ಇಪ್ಪತ್ತಕ್ಕೂ ಹೆಚ್ಚು.

ಬರವಣಿಗೆಯಲ್ಲಿ ಮಾತ್ರವಲ್ಲದೆ ಕನ್ನಡ ಪರ ಚಳವಳಿಗಳಲ್ಲಿ, ಗಡಿ–ಜಲ ವಿವಾದಗಳ ಸಂದರ್ಭದಲ್ಲಿ ಶ್ರೀಯುತರು ಈ ನೆಲದ ಹಕ್ಕು ಮತ್ತು ಅಭಿಮಾನಕ್ಕಾಗಿ ನಿರಂತರವಾಗಿ ಧ್ವನಿ ಎತ್ತಿದ್ದಾರೆ. ಗೋಕಾಕ್ ಚಳವಳಿಯಿಂದ ಆರಂಭಿಸಿ, ಮಹಾಜನ್ ವರದಿ ಜಾರಿಗಾಗಿ ಹೋರಾಟ, ಕಾವೇರಿ ನೀರಿನ ಹಕ್ಕಿಗಾಗಿ ನಡೆದ ಹೋರಾಟಗಳಲ್ಲಿ ಸ್ಮರಣೀಯವಾದ ಪಾತ್ರ ವಹಿಸಿರುತ್ತಾರೆ. ಕನ್ನಡ ಭಾಷೆಯ ಕುರಿತು ಅರಿವು ಮೂಡಿಸುವ ಸಲುವಾಗಿ ಸ್ವಾಭಿಮಾನಿ ಕರ್ನಾಟಕ ವೇದಿಕೆಯನ್ನು ಸ್ಥಾಪಿಸಿ ಜನಪರ, ನುಡಿಪರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರಲ್ಲಿ ಮಾದರಿಯಾಗಿ ಹೊರಹೊಮ್ಮಿದ್ದಾರೆ.

ಶ್ರೀಯುತರ ನಾಡು–ನುಡಿಯ ಸೇವೆಯನ್ನು ಗುರುತಿಸಿ ನಾಡೋಜ ಬರಗೂರು ಪ್ರತಿಷ್ಠಾನದ ‘ರಾಜಲಕ್ಷ್ಮಿ ಬರಗೂರು ಪುಸ್ತಕ ಪ್ರಶಸ್ತಿ’, ತುಮಕೂರು ಜಿಲ್ಲಾ ಕ.ಸಾ.ಪ. ದಿಂದ ಕೊಡಮಾಡುವ ‘ಸಾಹಿತ್ಯ ಶ್ರೀ ಪ್ರಶಸ್ತಿ’, ‘ರಾಮ್ ಜಾದವ್ ಪ್ರಶಸ್ತಿ’ ಮೊದಲಾದ ಹತ್ತಕ್ಕೂ ಹೆಚ್ಚು ಪ್ರಶಸ್ತಿ–ಗೌರವಗಳು ಅವರನ್ನು ಅರಸಿಕೊಂಡು ಬಂದಿವೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

# ವಿವಿಧ ಬೇಡಿಕೆ ಈಡೇರಿಸುವಂತೆ ಗ್ರಾಮ ಪಂಚಾಯಿತಿ ನೌಕರರ ಸಂಘದ ಪದಾಧಿಕಾರಿಗಳು ಪ್ರತಿಭಟನೆ

ಸೂರ್ಯಪ್ರಗತಿನ್ಯೂಸ್.ಕಾಂ



ರಾಮನಗರ: ವಿವಿಧ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿ ನೌಕರರ ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗದ ಪ್ರತಿಭಟನಾ ಸ್ಥಳದಲ್ಲಿ ಜಮಾಯಿಸಿದ ಜಿಲ್ಲೆಯ ಗ್ರಾಮ ಪಂಚಾಯಿತಿ ನೌಕರರು, ಜಿಲ್ಲಾಡಳಿತ ಹಾಗೂ ರಾಜ್ಯ ಸರ್ಕಾರ ಶೀಘ್ರದಲ್ಲಿಯೇ ತಮ್ಮ ಬೇಡಿಕೆ ಈಡೇರಿಸಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸಂಘಟನೆಯ ಜಿಲ್ಲಾಧ್ಯಕ್ಷ ಪ್ರದೀಪ್ ಮಾತನಾಡಿ, ಕಳೆದ ನಾಲ್ಕು ವರ್ಷಗಳಿಂದ ನೆನೆಗುದಿಗೆ ಬಿದ್ದಿರುವ ಕನಿಷ್ಠ ವೇತನದ ಅಂತಿಮ ಅಧಿಸೂಚನೆಯನ್ನು ಕೊನೆಗೂ ಆದೇಶ ಮಾಡಿ ದುಡಿಯುವ ಜನರಿಗೆ ಕನಿಷ್ಟ ವೇತನ ಜಾರಿ ಮಾಡಲು ಕ್ರಮವಹಿಸಿದೆ. ಸಮಿತಿ ಕಳೆದ ಹಲವಾರು ವರ್ಷಗಳಿಂದ ಗ್ರಾಮ ಪಂಚಾಯತಿ ನೌಕರರ ಕೆಲವು ಪ್ರಮುಖ ಬಾಕಿ ಉಳಿದುಕೊಂಡಿದೆ. ಬೇಡಿಕೆಗಳು ಇತ್ಯರ್ಥವಾಗದ ಸಚಿವರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳ ಜೊತೆ ಹಲವು ಸುತ್ತಿನ ಮಾತುಕತೆ ನಡೆದಿದ್ದರೂ ಕೆಲವ ಪ್ರಮುಖ ಬೇಡಿಕೆಗಳು ಇನ್ನೂವ ರೆಗೆ ಹಾಗೆ ಉಳಿಸಿಕೊಳ್ಳಲಾಗಿದೆ ಎಂದರು.

ಗ್ರಾಮ ಪಂಚಾಯತಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕರವಸೂಲಿಗಾರ, ಕ್ಲರ್ಕ್, ಕಂ ಡಾಟಾ ಎಂಟ್ರಿ ಆಪರೇಟರ್, ನೀರುಗಂಟಿಗಳು, ಜವಾನ, ಸ್ವಚ್ಛತಾಗಾರರನ್ನು ಏಕಕಾಲಕ್ಕೆ ಸರಕಾರಿ ನೌಕರರೆಂದು ಘೋಷಿಸಬೇಕು. ಸೇವಾ ಹಿರಿತನವನ್ನು ಪರಿಗಣಿಸಿ ಇನಕ್ರಿಮೆಂಟ್ ಕೊಡಬೇಕು ಎಂದರು.

ಗ್ರಾಮ ಪಂಚಾಯತಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರು ನಿವೃತ್ತಿ ಅಥವಾ ಮರಣ ಹೊಂದಿದರೆ ರೂ.6.0 0.000/–(ಆರು ಲಕ್ಷ) ಇಡಗಂಟು ಕೊಡಬೇಕು ಮತ್ತು ಗ್ರಾಮ ಪಂಚಾಯತ್‌ನಲ್ಲಿ ಠರಾವು ಮೂಲಕ ನೇಮಕಾತಿಯಾಗಿರುವ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತಿಯಿಂದ ಅನುಮೋದನೆ ಆಗದೆ ಇದ್ದರೂ ಅಂತಹ ಸಿಬ್ಬಂದಿಗಳಿಗೂ ಇಡಗಂಟು ನೀಡಲು ಆದೇಶ ನೀಡಬೇಕು.

ತರಬೇತಿ ಪಡೆದಿರುವ ಎಲ್ಲಾ ಸ್ವಚ್ಛವಾಹಿನಿ ನೌಕರರಿಗೆ ಕೆಲಸ ನೀಡಬೇಕು ಒಡಂಬಡಿಕೆ ಪತ್ರ ಮತ್ತು ಪ್ರತಿ ವರ್ಷದ ನವೀಕರಣ ಪದ್ಧತಿ ರದ್ದುಪಡಿಸಬೇಕು. 15ನೇ ಹಣಕಾಸಿನಲ್ಲಿ ವೇತನ ಪಾವತಿ ಮಾಡಬೇಕು ಪ್ರತಿಯೊಂದು ಪಂಚಾಯತಿಗೆ ಒಬ್ಬರೇ ಚಾಲಕರೆಂದು ಪರಿಗಣಿಸಿ ರೂ.15,000/– ವೇತನ ನಿಗದಿ ಮಾಡಬೇಕು ಎಂದರು.

ಗ್ರಾಮ ಪಂಚಾಯತಿಗಳಿಗೆ ಎರಡನೇ ಡಾಟಾ ಎಂಟ್ರಿ ಆಪರೇಟರ್ ಹುದ್ದೆಗೆ ಅವಕಾಶ ನೀಡಿದ್ದು ಸ್ವಾಗತ, ಆದರೆ ಈಗಾಗಲೇ ಗ್ರಾಮ ಪಂಚಾಯತಿಗಳಲ್ಲಿಡಾಟಾಸಿಬ್ಬಂದಿ ಮುಂದುವರೆಸಬೇಕು ಎಂದರು.

ಆದಾಯ ಕ್ಕೆ ನಿಗದಿಗೊಳಿಸಬೇಕು. ಅನುಗುಣವಾಗಿ ಕರವಸೂಲಿಗಾರರ ಹುದ್ದೆಗಳನ್ನು 2017 ರ ಒಳಗೆ ಇರುವ ಹೆಚ್ಚುವರಿ ಕರವಸೂಲಿಗಾರರಿಗೆ ಅನುಮೋದನೆ ನೀಡಬೇ ಕು.ರಾಜ್ಯದಲ್ಲಿ ಮೊದಲನೆ ಡಾಟಾ ಎಂಟ್ರಿ ಆಪರೇಟ ವ್‌ಗಳಿಗೆ ಕ್ಲರ್ಕ್ ಹುದ್ದೆ ತೆರವಾದ ನಂತರ ಅನುಮೋ ದನೆ ನೀಡಬೇಕೆಂಬ ಷರತ್ತನ್ನು ಕೈಬಿಟ್ಟು ಅನುಮೋದನೆ ನೀಡಲು ಅವಕಾಶ ನೀಡಬೇಕು. ಗ್ರಾಮ ಪಂಚಾಯತಿಗಳಲ್ಲಿ ಖಾಲಿ ಇರುವ ಕರವಸೂಲಿಗಾರ, ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್, ನೀರುಗಂಟೆಗಳು, ಜವಾನ, ಸ್ವಚ್ಛತಗಾರರ ಹುದ್ದೆಗಳನ್ನು ತುಂಬಬೇಕು ಎಂದರು.

ಗ್ರೇಡ್–1 ಕಾರ್ಯದರ್ಶಿಗಳಾದ ಪಿ.ಡಿ.ಓ ಹುದ್ದೆಗೆ ರಾಜ್ಯಮ ಟ್ಟದಲ್ಲಿ ಕೊಡುವ ಮುಂಬಡ್ತಿಯನ್ನು ಕೈಬಿಟ್ಟು ಜಿಲ್ಲಾ ಮಟ್ಟದಲ್ಲಿ ಮುಂಬಡ್ತಿಗೆ ಅವಕಾಶ ನೀಡಬೇಕು. ಪ್ರತಿಯೊಂದು ಗ್ರಾಮ ಪಂಚಾಯತಿಗಳಿಗೆ ಲೆಕ್ಕ ಸೃಷ್ಟಿಸಬೇಕು. ಬಿಲ್ ಕಲೆಕ್ಟರ್ ಮತ್ತು ಗುಮಾಸ್ತ ವೃಂದದಿಂದ ಗ್ರೇಡ್–2 ಕಾರ್ಯ ದರ್ಶಿ ಮತ್ತು ಲೆಕ್ಕ ಸಹಾಯಕ ಹುದ್ದೆಗಳಿಗೆ ನೇಮಕಗೊಂಡ ನೌಕರರಿಗೆ ಕೆ.ಸಿ.ಎಸ್.ಆರ್.325 ನಿಯಮಾನುಸಾರ ಹಿಂದಿನ ಸೇವೆಯನು ಪರಿಗಣಿಸಿ ಹಳೆ ಪಿಂಚಣಿ ಮಾಡಬೇಕು ಎಂದು ಆಗ್ರಹಿಸಿದರು.

ಗ್ರೇಡ್–1 ಪಂಚಾಯತಿಗಳನ್ನು ಜನಸಂಖ್ಯೆಗೆ ಆಧರಿಸಿ ಗ್ರಾಮ ಪಂಚಾಯತಿಗಳನ್ನು ಮೇಲ್ದರ್ಜೆಗೆ ಏರಿಸಬೇಕು ಎಂದು ಮನವಿ ಪತ್ರವನ್ನು ಜಿಲ್ಲಾಡಳಿತಕ್ಕೆ ನೀಡಲಾಗಿದೆ ಎಂದರು .ಈ ವೇಳೆ ಸಂಘಟನೆಯ ಮುಖಂಡರಾದ ಜಯಲಿಂಗು, ಸುರೇಶ್, ರಾಜೇಶ್, ನಾಗರಾಜು, ಪರಶಿವ, ನಂದಕುಮಾರ್, ಜೈಶಂಕರ್, ಯೋಗಲಿಂಗ ಸೇರಿದಂತೆ ಹಲವರುಇದ್ದರು.

ರಾಮನಗರ ಜಿಲ್ಲೆಯ ಎಲ್ಲಾ ತಾಲ್ಲೂಕು ಹಾಗೂ ವಿಶೇಷ ಸುದ್ದಿಗಾಗಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
ಬಿಡದಿ ಮಹೇಶ್ : ವರದಿಗಾರರರು 99728 34055

# ಹೆಚ್.ಸಿ.ಮಹದೇವಪ್ಪಗೆ ಉಪಮುಖ್ಯಮಂತ್ರಿ ಸ್ಥಾನ ಅಭಿಮಾನಿಗಳಿಂದ ಒತ್ತಾಯ



ಸೂರ್ಯಪ್ರಗತಿನ್ಯೂಸ್.ಕಾಂ

ಗುಂಡ್ಲುಪೇಟೆ .ಪಟ್ಟಣದ ಹೊಸ ಪ್ರವಾಸಿ ಮಂದಿರದಲ್ಲಿ ಡಾ.ಹೆಚ್ ಸಿ ಮಹದೇವಪ್ಪ ಅವರ ಅಭಿಮಾನಿ ಬಳಗದಿಂದ ಉಪಮುಖ್ಯಮಂತ್ರಿ ಸ್ಥಾನ ಹಾಗೂ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸಿ ಸುದ್ದಿ ಗೋಷ್ಠಿ ನಡೆಸಲಾಯಿತು.

ಪಟ್ಟಣದ ಹೊರವಲಯದಲ್ಲಿರುವ ಡಾ.ಬಿ ಆರ್ ಅಂಬೇಡ್ಕರ್ ಭವನದಿಂದ ಪ್ರತಿಭಟನೆ ಮೆರವಣಿಗೆ ಹೊರಟು ಹೊಸ ಪ್ರವಾಸಿ ಮಂದಿರದ ವರೆಗೆ ಸಾಗಿಬಂದ ಡಾ. ಹೆಚ್ ಸಿ ಮಹದೇವಪ್ಪ ಅಭಿಮಾನಿ ಬಳಗ ನಂತರ ಪ್ರವಾಸಿ ಮಂದಿರದಲ್ಲಿ ಸುದ್ದಿ ಗೋಷ್ಠಿ ನಡೆಸಿದರು.

ನಂತರ ಸುದ್ದಿ ಗೋಷ್ಠಿ ಯಲ್ಲಿ ಮುಖಂಡ ಮಹೇಶ್ ರಾಘವಾಪುರ ಮಾತನಾಡಿ ಶೋಷಿತ ಸಮುದಾಯದ ಗಟ್ಟಿ ಧ್ವನಿ, ಸಮುದಾಯದ ದೈತ್ಯ ಶಕ್ತಿ, ಚಾಮರಾಜನಗರ ದಿಂದ ಬೀದರ್ ವರೆಗೂ ಡಾ.ಹೆಚ್ ಸಿ ಮಹದೇವಪ್ಪ ಅವರ ಬೆಂಬಲಿಗರಿದ್ದು ಅಭಿಮಾನಿಗಳಿದ್ದು ದಲಿತ ಸಮುದಾತದ ಪ್ರಬುದ್ಧ ನಾಯಕರಾಗಿರುವ ಹಾಗೂ ಸಂವಿಧಾನದ ಆಶೋತ್ತರಗಳನ್ನು ಮನೆ ಮನೆಗಯ ತಲುಪಿಸಿದ ಮೇರು ನಾಯಕತ್ವವಿರುವ ಹೆಚ್. ಸಿ.ಎಂ ಅವರಿಗೆ ಉಪ ಮುಖ್ಯಮಂತ್ರಿ ಸ್ಥಾನದ ಜೊತೆಗೆ ಸಚಿವ ಸ್ಥಾನ ನೀಡಬೇ ಕು ಎಂದು ಗುಂಡ್ಲುಪೇಟೆ ವಿಧಾನಸಭೆ ಕ್ಷೇತ್ರದ ಅಭಿಮಾನಿ ಬಳಗದಿಂದ ಒತ್ತಾಯಿಸುತ್ತೇನೆ ಎಂದರು.

ನಂತರ ಡಾ.ಹೆಚ್ ಸಿ ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ರಾಜೇಂದ್ರ ಮಾತನಾಡಿ ಕಾಂಗ್ರೆಸ್ ದಲಿತ ಮುಖ್ಯಮಂತ್ರಿ ಮಾಡಬೇಕಿತ್ತು ಆದರೆ ಅದು ತಪ್ಪುತ್ತ ಬಂದಿದೆ ಸಾಕಷ್ಟು ದಲಿತರು ಕಾಂಗ್ರೆಸ್ ಬೆಂಬಲಿಸಿದ್ದು ಡಾ.ಹೆಚ್ ಸಿ ಮಹದೇವಪ್ಪ ದಲಿತರ ಧ್ವನಿಯಾಗಿದ್ದು ಅವರಿಗೆ ಉಪಮುಖ್ಯಮಂತ್ರಿ ಹಾಗೂ ಸಚುವ ಸ್ಥಾನ ನೀಡುವಂತೆ ಒತ್ತಾಯಿಸಿದರು.

ನಂತರ ನಂಜುಂಡಸ್ವಾಮಿ ಕಬ್ಬಹಳ್ಳಿ, ಕೆಂಪರಾಜು ಮಾತನಾಡಿ ಹೆಚ್ ಸಿ ಮಹದೇವಪ್ಪ ಅವರಿಗೆ ಸಚಿವ ಸ್ಥಾನ ನೀಡದಿದ್ದರೆ ದಲಿತ ಸಮುದಾಯ ಹೋರಾಟ ಮಾಡಬೇಕಾಗುತ್ತದೆ ಎಂದರು.

ಸುದ್ದಿ ಗೋಷ್ಠಿಯಲ್ಲಿ ಜಿ.ಪಂ ಮಾಜಿ ಸದಸ್ಯ ಬೊಮ್ಮಯ್ಯ, ಹೊರೆಯಾಲ ಕರಿಯಯ್ಯ , ಕಬ್ಬಳ್ಳಿ ನಂಜುಂಡಸ್ವಾಮಿ, ರಾಘವಾಪುರ ಮಹೇಶ್ ,ಪುರಸಭಾ ಮಾಜಿ ಸದಸ್ಯ ಮಲ್ಲರಾಜು, ಸೋಮಣ್ಣ, ಮುತ್ತಣ್ಣ, ಹಿರಿಕಾಟಿ ಶಿವು,ಕೆಂಪರಾಜು ಹೆಗ್ಗವಾಡಿ, ಕಬ್ಬಳ್ಳಿ ಮಹದೇವು, ರಾಜೇಂದ್ರ ಹಂಗಳ,ಮುರುಳಿ ಸೋಮ ಳ್ಳಿ, ಸುನಿಲ್ , ಪ್ರಕಾಶ್, ಪಾಳ್ಯ ನಾಗರಾಜು,ಮಂಜು ಚನ್ನವಡೆಯನಪುರ, ಪ್ರದೀಪ್ ರಾಘವಾಪುರ, ಸಿದ್ದರಾಜು ಹೊರೆಯಾಲ, ಎಪಿಎಂಸಿ ಉಪಾಧ್ಯಕ್ಷ ರಾಜು, ಬೆಳವಾಡಿ ರವೀಶ್ ಹಾಗೂ ಡಾ.ಹೆಚ್.ಸಿ ಮಹದೇವಪ್ಪ ಅಭಿಮಾನಿ ಬಳಗ ಚನ್ನವಡೆಯನಪುರ,ಮತ್ತಿತರರಿದ್ದರು.

# ಪ್ರತಿ ವರ್ಷ ಜೂನ್ 2 ರಂದು ತೆಲಂಗಾಣ ರಚನೆಯ ದಿನವನ್ನು (Telangana Formation Day)

ಸೂರ್ಯಪ್ರಗತಿನ್ಯೂಸ್.ಕಾಂ

ತೆಲಂಗಾಣ ರಾಜ್ಯ ರಚನೆ ದಿನ ಎಂದೂ ಕರೆಯಲ್ಪಡುವ ತೆಲಂಗಾಣ ರಚನೆ ದಿನವನ್ನು ಪ್ರತಿ ವರ್ಷ ಜೂನ್ 2 ರಂದು ಬಹಳ ಉತ್ಸಾಹ ಮತ್ತು ಹೆಮ್ಮೆಯಿಂದ ಆಚರಿಸಲಾಗುತ್ತದೆ. ಈ ಮಹತ್ವದ ದಿನವು ಜೂನ್ 2, 2014 ರಂದು ತೆಲಂಗಾಣ ರಾಜ್ಯದ ರಚನೆಯನ್ನು ಗುರುತಿ ಸುತ್ತದೆ, ಆ ಸಮಯದಲ್ಲಿ ಅದು ಭಾರತದ 29 ನೇ ರಾಜ್ಯವಾಯಿತು. ತೆಲಂಗಾಣದ ಜನರಿಗೆ, ಈ ದಿನವು ಕ್ಯಾಲೆಂಡರ್‌ನಲ್ಲಿ ಕೇವಲ ಒಂದು ದಿನಾಂಕವಲ್ಲ; ಇದು ಅವರ ದೀರ್ಘ ಹೋರಾಟ, ಸಾಂಸ್ಕೃತಿಕ ಗುರುತು ಮತ್ತು ಪ್ರತ್ಯೇಕ ರಾಜ್ಯಕ್ಕಾಗಿ ಅವರ ಆಕಾಂಕ್ಷೆಗಳ ಈಡೇರಿಕೆಯ ಆಚರಣೆಯಾಗಿದೆ.

2019 ರಲ್ಲಿ ಜಮ್ಮು ಮತ್ತು ಕಾಶ್ಮೀರವನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ಮರುಸಂಘಟಿಸಿದ ನಂತರ, ಭಾರತದಲ್ಲಿ ಈಗ 28 ರಾಜ್ಯಗಳಿ ವೆ. ಈ ಮರುಸಂಘಟನೆಯು ತೆಲಂಗಾಣ ರಚನೆಯ ದಿನಕ್ಕೆ ಮತ್ತೊಂದು ಐತಿಹಾಸಿಕ ಮಹತ್ವವನ್ನು ಸೇರಿಸಿದೆ, ಏಕೆಂದರೆ ಇದು ಭಾರತದ ರಾಜಕೀಯ ಮತ್ತು ಆಡಳಿತಾತ್ಮಕ ಭೂದೃಶ್ಯದ ಕ್ರಿಯಾತ್ಮಕ ಸ್ವರೂಪವನ್ನು ಎತ್ತಿ ತೋರಿಸುತ್ತದೆ. ಈ ಬದಲಾವಣೆಗಳ ಹೊರತಾಗಿಯೂ, ತೆಲಂಗಾಣ ರಚನೆಯು ಅದರ ಜನರ ನಿರಂತರ ಬೇಡಿಕೆ ಮತ್ತು ಪ್ರಜಾಪ್ರಭುತ್ವ ಮನೋಭಾವವನ್ನು ಪ್ರತಿಬಿಂಬಿಸುವ ಒಂದು ಸ್ಮಾರಕ ಘಟನೆಯಾಗಿ ಎದ್ದು ಕಾಣುತ್ತದೆ. ತೆಲಂಗಾಣ ರಾಜ್ಯ ರಚನೆಯ ದಿನದ ಆಚರಣೆಯು ರಾಜ್ಯದ ನಾಗರಿಕರ ಪ್ರಯಾಣ ಮತ್ತು ಸಾಧನೆಗಳನ್ನು ಗೌರವಿಸಲು ಮುಂದುವರಿಯುತ್ತದೆ, ಅವರ ಸ್ಥಿತಿಸ್ಥಾಪಕತ್ವ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ಆಚರಿಸುತ್ತದೆ.

ತೆಲಂಗಾಣ ರಚನೆಯ ದಿನದ ಇತಿಹಾಸ

ತೆಲಂಗಾಣವು ನಿಜಾಮರು ಆಳುತ್ತಿದ್ದ ಹೈದರಾಬಾದ್ ರಾಜಪ್ರಭುತ್ವದ ಭಾಗವಾಗಿತ್ತು. ನಿಜಾಮನ ಆಳ್ವಿಕೆಯಲ್ಲಿ ಈ ಪ್ರದೇಶವು ತನ್ನದೇ ಆದ ವಿಶಿಷ್ಟ ಸಂಸ್ಕೃತಿ, ಭಾಷೆ ಮತ್ತು ಆಡಳಿತವನ್ನು ಹೊಂದಿತ್ತು. 1947 ರಲ್ಲಿ ಭಾರತದ ಸ್ವಾತಂತ್ರ್ಯದ ನಂತರ, 1948 ರಲ್ಲಿ ಆಪರೇಷನ್ ಪೋಲೊ ಎಂಬ ಪೊಲೀಸ್ ಕಾರ್ಯಾಚರಣೆಯ ನಂತರ ಹೈದರಾಬಾದ್ ಅನ್ನು ಭಾರತೀಯ ಒಕ್ಕೂಟದೊಂದಿಗೆ ವಿಲೀನಗೊಳಿಸಲಾಯಿತು. ಈ ಏಕೀಕರಣವು ತೆಲಂಗಾಣ ರಚನೆಯ ದಿನದ ಇತಿಹಾಸದಲ್ಲಿ ಮಹತ್ವದ ಕ್ಷಣವನ್ನು ಗುರುತಿಸಿತು, ಇದು ಭವಿಷ್ಯದ ರಾಜಕೀಯ ಬೆಳವಣಿಗೆಗಳಿಗೆ ವೇದಿಕೆಯನ್ನು ಸಿದ್ಧಪಡಿಸಿತು.

ತೆಲಂಗಾಣ ರಾಜ್ಯ ರಚನೆಯ ದಿನದತ್ತ ಪ್ರಯಾಣವು ಇನ್ನೂ ಮುಗಿದಿಲ್ಲ. 1956 ರಲ್ಲಿ, ತೆಲಂಗಾಣ ಪ್ರದೇಶಗಳನ್ನು ಆಂಧ್ರ ಪ್ರದೇಶಗಳೊಂದಿಗೆ ವಿಲೀನಗೊಳಿಸಿ ಆಂಧ್ರಪ್ರದೇಶ ರಾಜ್ಯವನ್ನು ರೂಪಿಸಲಾಯಿತು, ಪ್ರಾಥಮಿಕವಾಗಿ ಭಾಷಾವಾರು ಆಧಾರದ ಮೇಲೆ. ಈ ವಿಲೀನವು ಸಾಮಾನ್ಯ ಭಾಷೆಗಳ ಆಧಾರದ ಮೇಲೆ ಆಡಳಿತ ಘಟಕಗಳನ್ನು ರಚಿಸುವ ಗುರಿಯನ್ನು ಹೊಂದಿರುವ ಭಾರತೀಯ ರಾಜ್ಯಗಳ ವಿಶಾಲ ಮರುಸಂಘಟನೆಯ ಭಾಗವಾಗಿತ್ತು. ಈ ಏಕೀಕರಣದ ಹೊರತಾಗಿಯೂ, ತೆಲಂಗಾಣದ ಜನರು ತಮ್ಮ ಪ್ರದೇಶದ ವಿಶಿಷ್ಟ ಸಾಂಸ್ಕೃತಿಕ ಮತ್ತು ಆರ್ಥಿಕ ಅಗತ್ಯಗಳನ್ನು ದೊಡ್ಡ ರಾಜ್ಯವಾದ ಆಂಧ್ರಪ್ರದೇಶದೊಳಗೆ ಸಮರ್ಪಕವಾಗಿ ಪರಿಹರಿಸಲಾಗಿಲ್ಲ ಎಂದು ಭಾವಿಸಿದರು. ಈ ನಿರ್ಲಕ್ಷ್ಯ ಮತ್ತು ಅಸಮಾನತೆಯ ಭಾವನೆಗಳು ಪ್ರತ್ಯೇಕ ರಾಜ್ಯದ ಬೇಡಿಕೆಗೆ ಬೀಜಗಳನ್ನು ಬಿತ್ತಿದವು. ಈ ಬೇಡಿಕೆಯು ಹಲವು ದಶಕಗಳ ನಂತರ ತೆಲಂಗಾಣ ರಚನೆಯ ದಿನದ ಆಚರಣೆಯಲ್ಲಿ ಕೊನೆಗೊಳ್ಳುತ್ತದೆ .

ತೆಲಂಗಾಣ ಜನರ ಆಳವಾಗಿ ಬೇರೂರಿರುವ ಆಕಾಂಕ್ಷೆಗಳನ್ನು ತಿಳಿದುಕೊಳ್ಳಲು ತೆಲಂಗಾಣ ರಚನೆಯ ದಿನದ ಇತಿಹಾಸವನ್ನು ಅರ್ಥಮಾಡಿಕೊಳ್ಳುವುದು ಅತ್ಯಗತ್ಯ. ಆರ್ಥಿಕ ಅಸಮಾನತೆಗಳು, ಮೂಲಸೌಕರ್ಯ ಅಭಿವೃದ್ಧಿಯ ಕೊರತೆ ಮತ್ತು ಸಾಂಸ್ಕೃತಿಕ ಭಿನ್ನತೆ ಗಳಿಂದ ಉತ್ತೇಜಿಸಲ್ಪಟ್ಟ ವಿಭಿನ್ನ ರಾಜ್ಯಕ್ಕಾಗಿ ಚಳುವಳಿ ವರ್ಷಗ ಳಲ್ಲಿ ತೀವ್ರಗೊಂಡಿತು. ತೆಲಂಗಾಣದ ಜನರು ತಮ್ಮ ಪ್ರದೇಶಕ್ಕೆ ನ್ಯಾಯಯುತವಾದ ಸಂಪನ್ಮೂಲಗಳನ್ನು ಹಂಚಿಕೆ ಮಾಡಲಾಗಿಲ್ಲ ಮತ್ತು ಸಾಕಷ್ಟು ರಾಜಕೀಯ ಗಮನವನ್ನು ಪಡೆಯಲಿಲ್ಲ ಎಂದು ಭಾವಿಸಿದರು. ಇದು ವ್ಯಾಪಕ ಆಂದೋಲನಗಳು ಮತ್ತು ಪ್ರತಿಭಟನೆಗಳಿಗೆ ಕಾರಣವಾಯಿತು, ಪ್ರತ್ಯೇಕ ರಾಜ್ಯದ ಬೇಡಿಕೆಯು ಮಹತ್ವದ ರಾಜಕೀಯ ವಿಷಯವಾಯಿತು. ಈ ಆಕಾಂಕ್ಷೆಗಳ ಅಂತಿಮ ಸಾಕ್ಷಾತ್ಕಾರವನ್ನು ಜೂನ್ 2, 2014 ರಂದು ತೆಲಂಗಾಣ ರಾಜ್ಯ ರಚನೆಯ ದಿನದ ಅಧಿಕೃತ ಘೋಷಣೆಯಿಂದ ಗುರುತಿಸಲಾಯಿತು . ಈ ದಿನವನ್ನು ಈಗ ಬಹಳ ಉತ್ಸಾಹ ಮತ್ತು ಹೆಮ್ಮೆಯಿಂದ ಆಚರಿಸಲಾಗುತ್ತದೆ, ಇದು ದೀರ್ಘಕಾಲದ ಮತ್ತು ದೃಢನಿಶ್ಚಯದ ಹೋರಾಟದ ಯಶಸ್ವಿ ಪರಾಕಾಷ್ಠೆಯನ್ನು ಸಂಕೇತಿಸುತ್ತದೆ. ಪ್ರತಿ ವರ್ಷ, ತೆಲಂಗಾಣ ರಚನೆಯ ದಿನವು ತೆಲಂಗಾಣ ಜನರ ಸ್ಥಿತಿಸ್ಥಾಪಕತ್ವ ಮತ್ತು ಏಕತೆಯ ಜ್ಞಾಪನೆಯಾಗಿ ಕಾರ್ಯನಿರ್ವಹಿಸುತ್ತದೆ, ಜೊತೆಗೆ ಅವರ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವ ಮತ್ತು ಆರ್ಥಿಕ ಪ್ರಗತಿಯನ್ನು ಸಾಧಿಸುವ ಅವರ ಬದ್ಧತೆಯನ್ನು ನೆನಪಿಸುತ್ತದೆ.

ತೆಲಂಗಾಣ ರಚನೆಯ ದಿನದ ಇತಿಹಾಸವು ತೆಲಂಗಾಣ ಜನರ ನಿರಂತರ ಮನೋಭಾವಕ್ಕೆ ಸಾಕ್ಷಿಯಾಗಿದೆ. ಜೂನ್ 2 ರಂದು ಆಚರಿಸಲಾಗುವ ತೆಲಂಗಾಣ ರಾಜ್ಯ ರಚನೆಯ ದಿನವು ಮನ್ನಣೆ ಮತ್ತು ಸ್ವಾಯತ್ತತೆಗಾಗಿ ಅವರ ದೀರ್ಘಕಾಲದ ಹೋರಾಟಕ್ಕೆ ಗೌರವವಾಗಿದೆ. ಇದು ಸಮೃದ್ಧ ಭವಿಷ್ಯವನ್ನು ಎದುರು ನೋಡುತ್ತಿರುವಾಗ ಅವರ ಹಿಂದಿನದನ್ನು ಗೌರವಿಸುವ ದಿನವಾಗಿದೆ.



ಲೇಖಕರು: ಎನ್. ಆನಂದ್
ತುಮಕೂರು, 9590578892

# ಹುಲಿ ದಾಳಿಯಿಂದ ಕುರಿಗಾಹಿ ಗಾಯ

ಗುಂಡ್ಲುಪೇಟೆ ತಾಲೂಕಿನ ಕುಣಗಹಳ್ಳಿಕಾಲನಿ(ಗೋಪಾಲಪುರ) ಗ್ರಾಮದ ಬಳಿ ಭಾನುವಾರ ಬೆಳಗ್ಗೆ ಹುಲಿ ದಾಳಿಯಿಂದ ಕುರಿಗಾಹಿ ಗಾಯಗೊಂಡಿದ್ದಾರೆ.

ಕು ಣಗಹಳ್ಳಿಕಾಲನಿಯ ಸೋಲಿಗ ಜನಾಂಗ ನೂರಾಳು(56ವರ್ಷ ) ಗಾಯಾಳು. ಇವರು ಗೋಪಾಲಸ್ವಾಮಿ ಬೆಟ್ಟ ಅರಣ್ಯ ವಲಯ ವ್ಯಾಪ್ತಿಯ ತಮ್ಮ ಗ್ರಾಮದ ಬಳಿ ಎಂದಿನಂತೆ ಕುರಿ ಮೇಯಿಸಲು ಕರೆದೋಯ್ಯುತ್ತಿದ್ದರು. ಈ ವೇಳೆ ಪೊದೆಯಲ್ಲಿ ಅಡಗಿದ್ದ ಹುಲಿ ಏಕಾಏಕಿ ಇವರ ದಾಳಿ ನಡೆಸಿದೆ. ದಾಳಿ ವೇಳೆ ಕೆಳಗೆ ಬಿದ್ದ ಇವರು ಜೋರಾಗಿ ಕೂಗಿಕೊಂಡ ಕಾರಣ ಹುಲಿ ಅಲ್ಲಿಂದ ಓಡಿ ಹೋಗಿದೆ. ಇವರಿಗೆ ಎಡತೊಡೆ ಮತ್ತು ಎಡಗೈಗೆ ಗಾಯಗಳಾಗಿದೆ. ನಂತರ ವಿಷಯ ತಿಳಿದು ಸ್ಥಳಕ್ಕಾಗಮಿಸಿದ ನಾವು ಅರಣ್ಯ ಇಲಾಖೆಯವರಿಗೆ ಮಾಹಿತಿ ನೀಡಿದೆವು ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

*ಆಸ್ಪತ್ರೆಗೆ ದಾಖಲು

ಗ್ರಾಮಸ್ಥರು ಮಾಹಿತಿ ನೀಡಿದ ಹಿನ್ನೆಲೆಯಲ್ಲಿ ಸ್ಥಳಕ್ಕೆ ತೆರಳಿ ಗಾಯಾಳು ನೂರಾಳು ರನ್ನು ಗುಂಡ್ಲುಪೇಟೆ ಕಬ್ಬಹಳ್ಳಿ ಸಾಹುಕಾರ್ ಕೆ.ಸಿ.ಸುಬ್ಬಣ್ಣ ಸಾರ್ವಜನಿಕ ಆಸ್ಪತ್ರೆಗೆ ದಾಖಲು ಮಾಡಲಾಗಿದೆ ಎಂದು ಅರಣ್ಯ ಇಲಾಖೆಯವರು ತಿಳಿಸಿದ್ದಾರೆ.

# ಪ್ರಸಕ್ತ ವರ್ಷದಿಂದ ಐಡಿ ಹಳ್ಳಿಯಲ್ಲಿ ಕೆಪಿಎಸ್ ಶಾಲೆಗೆ ಚಾಲನೆ



ಮಧು ಗಿರಿ.. ಐಡಿ ಹಳ್ಳಿಯಲ್ಲಿ ಪ್ರಸಕ್ತ ವರ್ಷದಿಂದ ಕರ್ನಾಟಕ ಪಬ್ಲಿಕ್ ಶಾಲೆಯನ್ನು ಪ್ರಾರಂಭಿಸಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಮಾದವರೆಡ್ಡಿ ತಿಳಿಸಿದ್ದಾರೆ ಐಡಿ ಹಳ್ಳಿಯಲ್ಲಿ ಕೆಪಿಎಸ್ ಶಾಲೆಗೆ ಚಾಲನೆ ನೀಡಿ ಮಾತನಾಡಿ ಶಾಸಕರಾದ ಕೆ ಎನ್ ರಾಜಣ್ಣ ರವರ ಆಶಯದಂತೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಕೆಪಿಎಸ್ ಶಾಲೆಯ ಪ್ರಾರಂಭಿಸಲಾಗಿದೆ ಎಂದು ತಿಳಿಸಿದರು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಹನುಮಂತರಾಯಪ್ಪ ಶಾಲಾ ದಾಖಲಾತಿ ಆಂದೋಲನಕ್ಕೆ ಚಾಲನೆ ನೀಡಿ ಮಾತನಾಡಿ ತಾಲೂಕಿನಲ್ಲಿ ಚಿಕ್ಕದಾಳವಟ್ಟ ಐಡಿ ಹಳ್ಳಿ ಬ್ಯಾಲ್ಯಾ ಗ್ರಾಮಗಳಲ್ಲಿ ಕೆಪಿಎಸ್ ಶಾಲೆ ಪ್ರಾರಂಭಿಸಲಾಗಿದೆ ಸರ್ಕಾರದ ನಿರ್ದೇಶನದಂತೆ ಶಾಲೆಗಳು ಇಂದು ಪ್ರಾರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಸಮವಸ್ತ್ರ ನೋಟ್ ಬುಕ್ ಬಿಸಿ ಊಟ ಇಂದು ಪ್ರಾರಂಭಿಸಲಾಗಿದೆ ಶಾಲೆ ಪ್ರಾರಂಭದ ಹಿನ್ನೆಲೆಯಲ್ಲಿ ಶಾಲಾವರಣ ಸ್ವಚ್ಛಗೊಳಿಸಿ ತಳಿರು ತೋರಣಗಳಿಂದ ಸಿಂಗರಿಸಲಾಗಿತ್ತು ಮಕ್ಕಳಲ್ಲಿ ಹಬ್ಬದ ವಾತಾವರಣ ಕಂಡು ಬಂದಿದೆ ಎಂದರು ಈ ಸಂದರ್ಭದಲ್ಲಿ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಚಿತ್ತಯ್ಯ ಬಿ ಆರ್ ಸಿ ಪವನ್ ಕುಮಾರ್ ರೆಡ್ಡಿ ತಾಲೂಕು ಪಂಚಾಯಿ ತಿ ಕಾರ್ಯನಿರ್ವಹಣಾಧಿಕಾರಿ ಬಿಕೆ ಉತ್ತಮ್ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಆಂಜನೇಯಲು ಇಸಿಓ ಶ್ರೀನಿವಾಸ ಮೂರ್ತಿ ಅನಂತರಾಮು ದಾಸಣ್ಣ ಶಿಕ್ಷಕರಾದ ಮಂಜುನಾಥ್ ರಮೇಶ್ ಸಂಜಯ್ ಮುಖ್ಯ ಶಿಕ್ಷಕರಾದ ಮಲ್ಲಿಕಾರ್ಜುನ ನಾಯಕ ಶಿಕ್ಷಕರಾದ ಪ್ರಶಾಂತ್ ಬಿರದಾರ್ ಎಸ್‌ಡಿಎಂಸಿ ಅಧ್ಯಕ್ಷ ಬಸವರಾಜು ಉಪಾಧ್ಯಕ್ಷ ಸುರೇಂದ್ರ ಪ್ರಾಂಶುಪಾಲರಾದ ಶಂಭುಲಿಂಗಯ್ಯ ಮುಖಂಡರುಗಳಾದ ಸದಾಶಿವ ರೆಡ್ಡಿ ನಾಗೇಶ್ ಮತ್ತಿತರರು ಹಾಜರಿದ್ದರು

# ಪುಟ್ಟರಂಗ ಶೆಟ್ಟರಿಗೆ ಸಚಿವ ಸ್ಥಾನ ನೀಡಲು ಸರ್ಕಾರಕ್ಕೆ ಜಿಲ್ಲಾ ಉಪ್ಪಾರ ಸಂಘದ ಒತ್ತಾಯ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಉಪ್ಪಾರ ಸಮಾಜದ ಏಕೈಕ ಶಾಸಕ ಚಾಮರಾಜ ನಗರ ವಿಧಾನಸಭಾ ಕ್ಷೇತ್ರ ಶಾಸಕ ಪುಟ್ಟರಂಗಶೆಟ್ಟಿ ಅವರಿಗೆ ಈ ಬಾರಿ ಸರ್ಕಾರದ ಮಂತ್ರಿಮಂಡಲದಲ್ಲಿ ಸ್ಥಾನ ನೀಡಬೇಕು, ನಾಲ್ಕು ಬಾರಿ ಶಾಸಕರಾದಈ ಹಿರಿಯ ನಾಯಕನಿಗೆ ಸಚಿವ ಸ್ಥಾನ ನೀಡಬೇ ಕು ಎಂದು ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಸಿ.ಎಸ್. ಮಂಜುನಾಥ್ ಕಾಂಗ್ರೆಸ್ ಹೈಕಮಾಂಡ್ ಹಾಗೂ ಹೊಸ ಸರ್ಕಾರದಲ್ಲಿ ಮುಖ್ಯಮಂತಿ ಆಗಲಿರುವ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದರು.

ಸೋಮವಾರ ನಗರದ ಉಪ್ಪಾರ ಸಂಘದ ಕಚೇರಿಂ ಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಿ.ಎಸ್. ಮಂಜುನಾಥ್, ಅತ್ಯಂತ ಹಿಂದುಳಿದ ಉಪ್ಪಾರ ಸಮಾಜದ ಪ್ರಗತಿಗೆ ಸರ್ಕಾರ ಕಾಳಜಿವಹಿಸಬೇಕು, ನಮ್ಮ ಸಮಾಜದ ಏಕೈಕ ಶಾಸಕರಾದ ಪುಟ್ಟರಂಗಶೆಟ್ಟಿ ಅವರಿಗೆ ಮಂತ್ರಿ ಸ್ಥಾನ ನೀಡಿ, ಸಮಾಜ ಕ್ಕೆ ಶಕ್ತಿ ತುಂಬಬೇಕು ಎಂದರು. ಸಮಾಜದ ಸ್ವಾಮೀಜಿಗಳೊಂದಿಗೆ ಸಂಘದ ಪ್ರಮುಖರು ಮುಖ್ಯಮಂತ್ರಿ ಆಗಲಿರುವ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿ ಪುಟ್ಟರಂಗಶೆಟ್ಟಿಅವರಿಗೆ ಸಚಿವ ಸಂಪುಟದಲ್ಲಿ ಅವಕಾಶ ಮಾಡಿ ಕೊಡಬೇಕು ಎಂದು ಕೋರಲಾಗುವುದು. ರಾಜ್ಯದಲ್ಲಿ ಸುಮಾರು 30ರಿಂದ 35 ಲಕ್ಷಉಪ್ಪಾರ ಸಮಾಜದ ಜನಸಂಖ್ಯೆ ಇದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ರಾಜಕೀಯವಾಗಿ ಹಿಂದುಳಿದ ಉಪ್ಪಾರ ಸಮಾಜಕ್ಕೆ ಸರ್ಕಾರ ಅಗತ್ಯ ಸೌಲಭ್ಯ ನೀಡಿ ನಾವೂ ಸಮಾಜದ ಮುಖ್ಯವಾಹಿನಿಗೆ ಬರಲು ನೆರವಾಗಬೇಕು ಎಂದು ಕೋರಿದರು.

ರಾಜ್ಯದ ಎಲ್ಲಾಜಿಲ್ಲಾ ಕೇಂದ್ರ ಗಳಲ್ಲಿ ಉಪ್ಪಾರ ಸಮಾಜ ಕ್ಕೆ ಸರ್ಕಾರ ಜಮೀನು ನೀಡಬೇಕು. ಆ ಜಾಗದಲ್ಲಿ ಶಿಕ್ಷಣ ಸಂಸ್ಥೆ, ವಿದ್ಯಾರ್ಥಿ ನಿಲಯಗಳ ಸ್ಥಾಪನೆ ಮಾಡಿ, ಸಮಾಜದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಸರ್ಕಾರ ಸಹಕಾರ ನೀಡಬೇಕು ಎಂದು ಸಿ.ಎಸ್. ಮಂಜುನಾಥ್ ಒತ್ತಾಯಿಸಿದರು.

ಸಂಘದ ಗೌರವಾಧ್ಯಕ್ಷ ಗಂಗಪ್ಪ, ಉಪಾಧ್ಯಕ್ಷ ತಿಪ್ಪೇಸ್ವಾಮಿ, ಮುಖಂಡರಾದ ಚೆನ್ನಿಗರಾಯಪ್ಪ, ಪಾವಗಡ ಅನಿಲ್, ರೇಣುಕಯ್ಯ, ರಾಮಚಂದ್ರಪ್ಪ, ಮೂಡಲ ಗಿರಿಯಪ್ಪ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

# ನಾಮದ ಚಿಲುಮೆಯಲ್ಲಿ ಪರಿಸರ ಸ್ನೇಹಿ 'ಜಲಸೇವೆ ಪ್ಲಾಸ್ಟಿಕ್ ಮುಕ್ತ ಸ್ವಚ್ಛತಾ ಆಂದೋಲನ' ಯಶಸ್ವಿ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು ನಾಮದ ಚಿಲುಮೆಯ ಪರಿಸರವನ್ನು ಉಳಿಸುವ ಹಾಗೂ ವನ್ಯಜೀವಿಗಳ ದಾಹ ತೀರಿಸುವ ಉದ್ದೇಶದಿಂದ, 'ಸಮಾನ ಮನಸ್ಕರ ಒಕ್ಕೂಟ'ದ ವತಿಯಿಂದ ಇಂದು 'ಜಲಸೇವೆ ಮತ್ತು ಪ್ಲಾಸ್ಟಿಕ್ ಮುಕ್ತ ಸ್ವಚ್ಛತಾ ಆಂದೋಲನ'ವನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಪರಿಸರ ಪ್ರೇಮಿಗಳು ಅತ್ಯುತ್ಸಾಹದಿಂದ ಪಾಲ್ಗೊಂಡು, ಅರಣ್ಯ ಪ್ರದೇಶದಲ್ಲಿದ್ದ ಸುಮಾರು 40 ರಿಂದ 50 ಚೀಲಗಳಷ್ಟು ಪ್ಲಾಸ್ಟಿಕ್ ತ್ಯಾಜ್ಯವನ್ನು (ಅಂದಾಜು 30 ಕೆಜಿ) ತೆರವುಗೊಳಿಸುವ ಮೂಲಕ ನಾಮದ ಚಿಲುಮೆಯನ್ನು ಸ್ವಚ್ಛಗೊಳಿಸಿದರು. ಅರಣ್ಯದ ಪ್ರಾಣಿ–ಪಕ್ಷಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕಲ್ಪಿಸಿ ಮಾನವೀಯತೆ ಮೆರೆದರು. ಕಾರ್ಯಕ್ರಮದ ಕೊನೆಯಲ್ಲಿ ಚಂದ್ರಶೇಖರ್ ಅವರು ಪರಿಸರ ಗೀತೆಯನ್ನು ಹಾಡುವ ಮೂಲಕ ಕಾರ್ಯಕ್ರಮಕ್ಕೆ ಅರ್ಥಪೂರ್ಣ ಅಂತ್ಯ ಹಾಡಿದರು.

ಈ ಆಂದೋಲನದ ಸಂಘಟನೆ, ಆಯೋಜನೆ ಹಾಗೂ ನೇತೃತ್ವವನ್ನು ಸಲೀಂ ಖಾನ್ ತುಮಕೂರು ಅವರು ವಹಿಸಿಕೊಂಡಿದ್ದರು. ಅಭಿಯಾನದಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು ಭಾವೈಕ್ಯ ಯುವಜನ ಸಂಘದ ಪ್ರಧಾನ ಕಾರ್ಯದರ್ಶಿ ಸಲೀಂ ಖಾನ್
ಯೂತ್ ಫಾರ್ ಸೇವಾ ತುಮಕೂರು ಚಾಪ್ಟರ್‌ನ ಜಿಲ್ಲಾ ಸಂಯೋಜಕರು ಅರವಿಂದ್ ಹಾಗೂ ಸ್ವಯಂಸೇವಕರು ಭಾರತ ಸೇವಾದಳದ ಜಿಲ್ಲಾ ಸಂಘಟಕರು ಶಿವರಾಜ್‌ನವಿಲು ಫೌಂಡೇಶನ್‌ನ ಚಂದ್ರಶೇಖರ್‌ಅಭಿನವ ರಂಗ ಸಂಪನ್ಮೂಲ ಕೇಂದ್ರದ ಅನುರಾಗ್ ಭೀಮಸಂದ್ರ ಐಕ್ಯ ಫೌಂಡೇಶನ್‌ನ ಶ್ರೀನಿವಾಸ್
ಕಲಾಕಲ್ಪಂ ಸಂಸ್ಥೆಯ ಲೋಕೇಶ್‌ಪ್ರೇರಣಾ ಡಿಸೇಬಲ್ಡ್ ವೆಲ್ಫೇರ್ ಟ್ರಸ್ಟ್‌ನ ವೆಂಕಟೇಶ್
ಇವರೊಂದಿಗೆ 20ಕ್ಕೂ ಹೆಚ್ಚು ಸ್ವಯಂಸೇವಕ ಪರಿಸರವಾದಿಗಳು ಈ ಅಭಿಯಾನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

## ರಾಜ್ಯ ರಾಜಕಾರಣದ ಬದಲಾವಣೆ ಹಾಗೂ ಸ್ಥಳೀಯ ಸಂಸ್ಥೆ ಚುನಾವಣೆ ಹಿನ್ನೆಲೆ:

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕಹಳ್ಳಿ ಕ್ಷೇ ತ್ರದ ಅಭಿವೃದ್ಧಿಗೆ ಪಕ್ಷದ ನಾಯಕರಿಗೆ ಉನ್ನತ ಸ್ಥಾನಮಾನ ನೀಡಲು ಸೈಯದ್ ನೂರ್ ಫಕ್ರುದ್ದೀನ್ ಆಗ್ರಹ

ಚಿಕ್ಕನಾ ಯಕಹಳ್ಳಿ ಕ್ಷೇತ್ರದ ಅಭಿವೃದ್ಧಿ ಹಾಗೂ ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಗಳ ದೃಷ್ಟಿಯಿಂದ ಪಕ್ಷದ ಪ್ರಮುಖ ನಾಯಕರಾದ ಶ್ರೀ ಕೆ.ಎಸ್. ಕಿರಣ್ ಕುಮಾರ್, ಶ್ರೀ ಪಿ.ಟಿ. ಚಿಕ್ಕಣ್ಣ ಹಾಗೂ ಶ್ರೀ ಡಿ.ಟಿ. ಶ್ರೀನಿವಾಸ್ ಅವರಿಗೆ ಸೂಕ್ತ ಸ್ಥಾನಮಾನ ನೀಡಬೇಕೆಂದು ಕೋರಿ ತುಮಕೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ಮನವಿ ಸಲ್ಲಿಸುತ್ತಿದ್ದೇನೆ ಎಂದು ಹುಳಿಯಾರು ಪಟ್ಟಣ ಪಂಚಾಯಿತಿ ನಾಮನಿರ್ದೇಶಿತ ಸದಸ್ಯ ಹಾಗೂ ಬ್ಲಾಕ್ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸೈಯದ್ ನೂರ್ ಫಕ್ರುದ್ದೀನ್ ತಿಳಿಸಿದ್ದಾರೆ. ರಾಜ್ಯ ರಾಜಕಾರಣದಲ್ಲಿ ನಡೆಯುತ್ತಿರುವ ಮಹತ್ವದ ಬದಲಾವಣೆಗಳ ಹಿನ್ನೆಲೆಯಲ್ಲಿ ಈ ಮನವಿಯನ್ನು ಜಿಲ್ಲಾ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳು, ಕೆಪಿಸಿಸಿ ಅಧ್ಯಕ್ಷರು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಗಮನಕ್ಕೆ ತಂದು ಶಿಫಾರಸು ಮಾಡುವಂತೆ ಕೋರಲಾಗುವುದು. ಕ್ಷೇತ್ರದ ಬಲವರ್ಧನೆಗಾಗಿ:

ಶ್ರೀ ಕೆ.ಎಸ್. ಕಿರಣ್ ಕುಮಾರ್ (ಮಾಜಿ ಶಾಸಕರು):ಎಂಎಲ್ಸಿ ಸ್ಥಾನ.ಶ್ರೀ ಪಿ.ಟಿ. ಚಿಕ್ಕಣ್ಣ (ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು, ಹುಳಿಯಾರು): ನಿಗಮ ಮಂಡಳಿ ಅಧ್ಯಕ್ಷ ಅಥವಾ ಉಪಾಧ್ಯಕ್ಷ/ಸದಸ್ಯ ಸ್ಥಾನ.

ಶ್ರೀ ಡಿ.ಟಿ. ಶ್ರೀನಿವಾಸ್ (ಆಗ್ನೇಯ ಶಿಕ್ಷಕರ ಕ್ಷೇತ್ರ): ಸಚಿವ ಅಥವಾ ಸಿಎಂ ರಾಜಕೀಯ ಕಾರ್ಯದರ್ಶಿ ಸ್ಥಾನ.

ಈ ನೇಮಕಾತಿಗಳು 2028ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷವನ್ನು ಅಜೇಯ ಶಕ್ತಿಯನ್ನಾಗಿ ರೂಪಿಸಲು ನಿರ್ಣಾಯಕವಾಗಲಿದೆ ಎಂದು ಸೈಯದ್ ನೂರ್ ಫಕ್ರುದ್ದೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅತಿಥಿ ಶಿಕ್ಷಕರ ನೇಮಕಾತಿಗೆ ಅರ್ಜಿ ಆಹ್ವಾನ

ತುಮಕೂರು;: ಗುಬ್ಬಿ ತಾಲ್ಲೂಕಿನ ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿರುವ ಕಿತ್ತೂರು ರಾಣಿ ಚೆನ್ನಮ್ಮ/ಮೊರಾರ್ಜಿ ದೇಸಾಯಿ/ಡಾ: ಅಂಬೇಡ್ಕರ್ ಹಾಗೂ ಇಂದಿರಾಗಾಂಧಿ ವಸತಿ ಶಾಲೆಗಳಲ್ಲಿ ಖಾಲಿ ಇರುವ ಕನ್ನಡ, ಇಂಗ್ಲೀಷ್, ಹಿಂದಿ, ಗಣಿತ, ವಿಜ್ಞಾನ, ಸಮಾಜ ವಿಜ್ಞಾನ, ಕಂಪ್ಯೂಟರ್ ಸೈನ್ಸ್ ಹಾಗೂ ದೈಹಿಕ ಶಿಕ್ಷಣ ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿ ನಮೂನೆಯನ್ನು ಅಗತ್ಯ ದಾಖಲಾತಿಗಳೊಂದಿಗೆ ಜೂನ್ 6ರೊಳಗಾಗಿ ಗುಬ್ಬಿ ತಾಲ್ಲೂಕಿನ ವಸತಿ ಶಾಲೆಗಳಿಗೆ ಅಥವಾ ಇ–ಮೇಲ್: ಇಡುಭಿಜಟಜಢಿ87@ ರಟಚುಟ.ಛಿಂಟ ಗೆ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 8496915781/ 9535808425ನ್ನು ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆ ತಿಳಿಸಿದೆ.

## ಪ್ರಥಮ ಬಿ.ಸಿ.ಎ. ಪದವಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ತುಮಕೂರು: ತುಮಕೂರು ವಿಶ್ವವಿದ್ಯಾನಿಲಯದ ಸಿರಾ ಸ್ನಾತಕೋತ್ತರ ಕೇಂದ್ರ ಭುವನಹಳ್ಳಿ, ಸಿರಾದಲ್ಲಿ 2026–27ನೇ ಸಾಲಿನ ಪ್ರಥಮ ಬಿ.ಸಿ.ಎ ಪದವಿಗಳಿಗೆ ಪ್ರವೇಶ ಕಲ್ಪಿಸಲು ಲಭ್ಯವಿರುವ 30 ಸೀಟುಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತ ವಿದ್ಯಾರ್ಥಿಗಳು ಅರ್ಜಿ ಪ್ರತಿಯೊಂದಿಗೆ ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಪಿಯುಸಿ ಅಂಕಪಟ್ಟಿ, ಇತ್ತೀಚಿನ ಜಾತಿ, ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಪ್ರತಿ, ಇತ್ತೀಚಿನ ಭಾವಚಿತ್ರ ಲಗತ್ತಿಸಿ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 9448979799, 7996080122ನ್ನು ಸಂಪರ್ಕಿಸಬಹುದಾಗಿದೆ ಎಂದು ಸಿರಾ ಸ್ನಾತಕೋತ್ತರ ಕೇಂದ್ರದ ಸಂಯೋಜಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ತುಮಕೂರು ತಾಲ್ಲೂಕು ಊರುಕೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುಪ್ಪೂರು ಗ್ರಾಮದಲ್ಲಿ ಮಳೆಯಿಂದ ರಸ್ತೆ ಬದಿಯಲ್ಲಿದ್ದ ಬೇವಿನ ಮರ ರಸ್ತೆಗೆ ಅಡ್ಡಲಾಗಿ ಅಂಗನವಾಡಿ ಕಟ್ಟಡದ ಮೇಲೆ ಬಿದ್ದಿದೆ. ಅಂಗನವಾಡಿ ಕಟ್ಟಡದ ಮೇಲೆ ಮರ ಬಿದ್ದಿದ್ದರೂ ಸಹ ಯಾವ ಅಧಿಕಾರಿಗಳು ಇತ್ತ ಕಡೆ ತಲೆ ಹಾಕಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

## ಹಿಪ್ಪು ನೇರಳೆ ನಾಟಿಯಲ್ಲಿ ಮಧುಗಿರಿ ತಾಲೂಕು ನೂರಕ್ಕೆ ನೂರರಷ್ಟು ಸಾಧನೆ

ಸೂರ್ಯಪ್ರಗತಿನ್ಯೂಸ್.ಕಾಂ

ಮಧು ಗಿರಿ ...ಹಿಪ್ಪು ನೇರಳೆ ನಾಟಿಯಲ್ಲಿ ಮಧುಗಿರಿ ತಾಲೂಕು ನೂರಕ್ಕೆ ನೂರರಷ್ಟು ಸಾಧನೆ ಮಾಡಿದೆ ದ್ವೀ ತಳಿ ರೇಷ್ಮೆ ಉತ್ಪಾದನೆಯಲ್ಲಿ ಜಿಲ್ಲೆಯಲ್ಲಿ ಮೂರನೇ ಸ್ಥಾನದಲ್ಲಿದೆ ಇಂದು ರೇಷ್ಮೆ ಇಲಾಖೆಯ ಉಪನಿದೇ ಶಕ



ಲಕ್ಷ್ಮಿ ನರಸಯ್ಯ ತಿಳಿಸಿದ್ದಾರೆ ವಯ್ಯೋ ನಿವೃತ್ತಿ ಹೊಂದಿದ ರೇಷ್ಮೆ ವಿಸ್ತರಣಾಧಿಕಾರಿಗಳು ತಾಂತ್ರಿಕ ಸೇವಾ ಕೇಂದ್ರ ಕೊಡಿಗೇನಹಳ್ಳಿ ವೀರಣ್ಣ ರವರ ಬೀಳ್ಕೊಡುಗೆ ಸಮಾರಂಭದಲ್ಲಿ ಅಭಿನಂದಿಸಿ ಮಾತನಾಡಿದ ಅವರು ರೇಷ್ಮೆ ಬೆಳೆಗಾರರಿಗೆ ತಾಂತ್ರಿಕ ಮಾಹಿತಿ ನೀಡುವಲ್ಲಿ ವೀರಣ್ಣ ರವರ ಕೊಡುಗೆ ಅಪಾರ ವೀರಣ್ಣರವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ತಿಳಿಸಿದರು ನಿವೃತ್ತಿ ಹೊಂದಿದ ವಿಸ್ತರಣಾಧಿಕಾರಿ ವೀರಣ್ಣ ಮಾತನಾಡಿ ನನಗೆ ಮಧುಗಿರಿ ತಾಲೂಕಿನಲ್ಲಿ ಕೆಲಸ ಮಾಡುವ ಅವಕಾಶ ಸಿಕ್ಕಿತು ಉತ್ತಮ ಕೆಲಸ ಮಾಡಿದ ತೃಪ್ತಿ ಇದೆ ನನ್ನ ಕೆಲಸ ಕಾರ್ಯಗಳಿಗೆ ನಿರಂತರ ಸಹಕಾರ ನೀಡಿದ ಉಪ ನಿರ್ದೇಶಕ ಲಕ್ಷ್ಮೀ ನರಸಯ್ಯ ಸಹಾಯಕ ನಿರ್ದೇಶಕ ಮೋಹನ್ ಅವರನ್ನು ಅಭಿನಂದಿಸುವುದಾಗಿ ತಿಳಿಸಿದರು ಈ ಸಂದರ್ಭದಲ್ಲಿ ರೇಷ್ಮೆ ಇಲಾಖೆಯ ಸಹಾಯಕ ನಿರ್ದೇಶಕ ಡಿ ಮೋಹನ್ ರೇಷ್ಮೆ ಇಲಾಖೆಯ ವಿಸ್ತರಣಾಧಿಕಾರಿಗಳಾದ ನಾರಾಯಣ ರೇಷ್ಮೆ ನಿರೀಕ್ಷಕರಾದ ರಮೇಶ ಕಚೇರಿ ಅಧೀಕ್ಷಕರಾದ ಶ್ರೀಕಾಂತ್ ಪ್ರಥಮ ಶ್ರೀಮತಿ ನಳಿನ ಸಿಬ್ಬಂದಿಗಳಾದ ಪುಟ್ಟಮ್ಮ ಶಮಿಮ್ ತಾಜ್ ರೇಷ್ಮೆ ಬೆಳೆಗಾರರು ಹಾಜರಿದ್ದರು

# ವಿಶ್ವ ಹಾಲು ದಿನಾಚರಣೆ: ಭಾರತದ ಗ್ರಾಮೀಣ ಆರ್ಥಿಕತೆಗೆ ಬೆನ್ನೆಲುಬಾಗಿ ನಿಂತಿರುವುದು ಹೈನುಗಾರಿಕೆ ಕ್ಷೇತ್ರ

ಸೂರ್ಯಪ್ರಗತಿನ್ಯೂಸ್.ಕಾಂ

ಶಿರಾ : ಹಾಲಿನ ಪಾವಿತ್ರ್ಯತೆ ಮತ್ತು ಮಹತ್ವವನ್ನು ನಾವೆಲ್ಲರೂ ಅರಿತು ಇದರ ಉಪಯುಕ್ತತೆಯನ್ನು ಸಾರುವವತ್ತ ಹೆಜ್ಜೆ ಹಾಗಬೇಕಿದೆ, ಹಾಲು ಅಮೃತಕ್ಕೆ ಸಮಾನವಾದ ಪರಿಶುದ್ಧ ಆಹಾರವಾಗಿದೆ. ಇದರ ನಿಯಮಿತ ಸೇವನೆಯಿಂದ ದೇಹದಲ್ಲಿ ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ ಎಂದು ತುಮುಕೂರು ಹಾಲು ಒಕ್ಕೂಟದ ನಿರ್ದೇಶಕ ಎಸ್. ಆರ್. ಗೌಡ ಹೇಳಿದರು, ಅವರು ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಜೂ.1ನೇ ಸೋಮವಾರ ತುಮಕೂರು ಹಾಲು ಒಕ್ಕೂಟದ (ಕೆಎಂಎಫ್) ವತಿಯಿಂದ ಆಯೋಜಿಸಲಾಗಿದ್ದ 'ವಿಶ್ವ ಹಾಲು ದಿನಾಚರಣೆಯ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಮಕ್ಕಳು ಮತ್ತು ಪೋಷಕರು ಹಾಲಿನ ಬದಲಾಗಿ ಕಾಫಿ, ಟೀ ಹಾಗು ಇನ್ನಿತರ ಪಾನೀಯಗಳಿಗೆ ಅತೀ ಹೆಚ್ಚು ಮಾರುಹೋಗುತ್ತಿದ್ದಾರೆ. ಯಾವುದೇ ಕಾಯಿಲೆಗಳಿಗೆ ತುತ್ತಾಗದೆ ಬಲಿಷ್ಠರಾಗಲು ಮತ್ತು ನೂರಾರು ವರ್ಷಗಳ ಕಾಲ ಆರೋಗ್ಯವಾಗಿರಲು ಮಕ್ಕಳಿಗೆ ಪೌಷ್ಟಿಕಾಂಶಯುಕ್ತ ಹಾಲನ್ನು ಕುಡಿಸುವಂತೆ ಪೋಷಕರಿಗೆ ಕಿವಿಮಾತು ಹೇಳಲಾಯಿತು, ಯಾವುದೇ ಕಲಬೆರಕೆ ಇಲ್ಲದ, ಪರಿಶುದ್ಧವಾದ 'ನಂದಿನಿ ಹಾಲು', ಮೊಸರು, ತುಪ್ಪ ಮತ್ತು ಬೆಣ್ಣೆಯನ್ನು ಬಳಸಬೇಕು, ಗ್ರಾಹಕರು ನಂದಿನಿ ಹಾಲನ್ನು ಖರೀದಿಸುವುದರಿಂದ, ಆ ಹಾಲನ್ನು ಉತ್ಪಾದಿಸುವ ಬಡ ಹೈನುಗಾರಿಕೆ ರೈತ ಕುಟುಂಬಗಳಿಗೆ ಪರೋಕ್ಷವಾಗಿ ಆರ್ಥಿಕ ಶಕ್ತಿ ನೀಡಿದಂತಾಗುತ್ತದೆ. ಆದ್ದರಿಂದ ಪ್ರತಿಯೊಂದು ಕುಟುಂಬವೂ ಪ್ರತಿದಿನ ಕನಿಷ್ಠ ಒಂದು ಲೀಟರ್ ನಂದಿನಿ ಹಾಲನ್ನು ಖರೀದಿಸುವಂತೆ ಮನವಿ ಮಾಡಿದರು.

ತಾಯಿ ಮತ್ತು ಮಕ್ಕಳ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ. ಸಿ. ಎಂ. ಗೌಡ ಮಾತಾನಾಡಿ ; ಜಾಗತಿಕ ಆಹಾರ ವ್ಯವಸ್ಥೆಯಲ್ಲಿ ಹಾಲಿನ ಮಹತ್ವವನ್ನು ಸಾರುವ ಮತ್ತು ನೆನಪಿಸುವ ಉದ್ದೇಶದಿಂದ ಪ್ರತಿ ವರ್ಷ ಜೂನ್ 1 ರಂದು ವಿಶ್ವಾದ್ಯಂತ 'ವಿಶ್ವ ಕ್ಷೀರ ದಿನ'ವನ್ನು ಆಚರಿಸಲಾಗುತ್ತದೆ.

ಹಾಲು ಕೇವಲ ಒಂದು ಪಾನೀಯವಲ್ಲ; ಇದು ಪ್ರೋಟೀನ್,



ಕ್ಯಾಲ್ಸಿಯಂ ಮತ್ತು ಅಗತ್ಯ ವಿಟಮಿನ್‌ಗಳ ಆಗರವಾಗಿದೆ. ಮಕ್ಕಳ ಬೆಳವಣಿಗೆಯಿಂದ ಹಿಡಿದು ವೃದ್ಧರ ಆರೋಗ್ಯದವರೆಗೆ ಹಾಲು ಮತ್ತು ಹಾಲಿನ ಉತ್ಪನ್ನಗಳು ಅತ್ಯಂತ ಅವಶ್ಯಕ. ಜಾಗತಿಕವಾಗಿ ಸಮತೋಲಿತ ಆಹಾರದಲ್ಲಿ ಹಾಲಿಗೆ ಅಗ್ರಸ್ಥಾನವಿದೆ. ಇದೇ ಸಂದರ್ಭದಲ್ಲಿ ಇಂತಹ ಅರ್ಥಪೂರ್ಣ ಕಾರ್ಯಕ್ರಮವನ್ನು ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಆಯೋಜಿಸಿ ರೋಗಿಗಳಿಗೆ, ಶಿಶುಗಳಿಗೆ ಹಾಗೂ ತಾಯಂದಿರಿಗೆ ಉಚಿತವಾಗಿ ಹಾಲು, ಹಣ್ಣು ಮತ್ತು ಬ್ರೆಡ್ (ಬನ್) ವಿತರಿಸಿದ ತುಮಕೂರು ಹಾಲು ಒಕ್ಕೂಟದ ನಿರ್ದೇಶಕರು ಹಾಗೂ ಆಡಳಿತ ವರ್ಗದ ಸಿಬ್ಬಂದಿಗಳಿಗೂ ಧನ್ಯವಾದ ಅರ್ಪಿಸಿದರು.

ತುಮಕೂರು ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಗಿರೀಶ್. ಬಿ. ಮಾತನಾಡಿ ; ನಮ್ಮ ರಾಜ್ಯದಲ್ಲಿ ಕೆ.ಎಂ.ಎಫ್ ಹಾಲು ಒಕ್ಕೂಟಗಳು ಲಕ್ಷಾಂತರ ರೈತರಿಗೆ ನಿರಂತರ ಆದಾಯದ ಮೂಲವಾಗಿವೆ. ಪ್ರತಿ ದಿನ ಕೋಟ್ಯಂತರ ಲೀಟರ್ ಹಾಲನ್ನು ಸಂಗ್ರಹಿಸಿ, ಸಂಸ್ಕರಿಸಿ, ನಂದಿನಿ ಬ್ರಾಂಡ್ ಅಡಿಯಲ್ಲಿ ಜನರಿಗೆ ತಲುಪಿಸುವ ಮೂಲಕ ರಾಜ್ಯದ ಗ್ರಾಮೀಣ ಜನತೆಯ ಆರ್ಥಿಕ ಸ್ವಾವಲಂಬನೆಗೆ ಶಕ್ತಿ ತುಂಬಿವೆ.

ಹೈನುಗಾರಿಕೆಯನ್ನು ಅವಲಂಬಿಸಿರುವ ಕೋಟ್ಯಂತರ ರೈತರ ಶ್ರಮವನ್ನು ಗುರುತಿಸಿ ಡೈರಿ ಉದ್ಯಮದ ಮಹತ್ವ ಮತ್ತು ಅದರ ಆರ್ಥಿಕ ಕೊಡುಗೆಯನ್ನು ಜಗತ್ತಿಗೆ ಪರಿಚಯಿಸುತ್ತಾ ಬಂದಿವೆ, ನಾವೆಲ್ಲರೂ ಸ್ಥಳೀಯವಾಗಿ ಉತ್ಪಾದನೆಯಾಗುವ ಹಾಲು ಮತ್ತು ಹಾಲಿನ ಉತ್ಪನ್ನಗಳನ್ನು ಬಳಸಿ, ನಮ್ಮ ರಾಜ್ಯದ ರೈತರ ಹಿತವನ್ನು ಕಾಪಾಡೋಣ ಎಂದರು.

ಒಕ್ಕೂಟದ ಪದಾಧಿಕಾರಿಗಳು ಹಾಗೂ ಅಧಿಕಾರಿಗಳ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಆಸ್ಪತ್ರೆಯ ರೋಗಿಗಳಿಗೆ ಪೌಷ್ಟಿಕ ಆಹಾರಗಳನ್ನು ವಿತರಿಸುವ ಜೊತೆಗೆ, ನಂದಿನಿ ಹಾಲಿನ ಬಳಕೆ ಹಾಗೂ ರೈತರ ಬೆಂಬಲದ ಕುರಿತು ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದ ಪ್ರಮುಖ ಅಂಶಗಳು

ಉಚಿತ ವಿತರಣೆ: ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ದಾಖಲಾಗಿದ್ದ ರೋಗಿಗಳಿಗೆ, ಶಿಶುಗಳಿಗೆ ಹಾಗೂ ತಾಯಂದಿರಿಗೆ ಉಚಿತವಾಗಿ ಹಾಲು, ಹಣ್ಣು ಮತ್ತು ಬ್ರೆಡ್ (ಬನ್) ವಿತರಿಸಲಾಯಿತು.

ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಅಜ್ಜಣ್ಣ ಹಾಗೂ ಎಪಿಎಂಸಿ ಮಾಜಿ ಅಧ್ಯಕ್ಷರು, ವಿಸ್ತರಣಾಧಿಕಾರಿ ಚೈತ್ರಾ, ಪಶುವೈದ್ಯಾಧಿಕಾರಿ ಡಾ. ಶ್ರೀಕಾಂತ್, ಸಮಾಲೋಚಕರಾದ ಬಾಬಾ ಫಕ್ರುದ್ದೀನ್.ಪಿ.ಎಂ, ಪ್ರವೀಣ್, ಮಹಿಳಾ ಮುಖಂಡರಾದ ಜಯಮ್ಮ, ಲಲಿತಮ್ಮ ಮತ್ತು ಮುಖಂಡರುಗಳಾದ ಶಿವಾನಂದ್, ತಿಪ್ಪೇಸ್ವಾಮಿ, ಕೃಷ್ಣಪ್ಪ, ಇನಾಂ ಗೊಲ್ಲಹಳ್ಳಿ ಶಿವಣ್ಣ, ರಾಮಕೃಷ್ಣಪ್ಪ, ಸಂತೋಷ್, ಈರಣ್ಣ ಹಾಗೂ ಪ್ರಕಾಶ್, ನರೇಂದ್ರ ಸೇರಿದಂತೆ ಹಲವು ಗಣ್ಯರು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಪ್ರೀತಿಯ ನೆಚ್ಚಿನ ಓದುಗ ಮಿತ್ರರೇ ಸೂರ್ಯಪ್ರಗತಿ ಕನ್ನಡ ದಿನಪತ್ರಿಕೆಯ ಸುದ್ದಿಗಳನ್ನ ಅಂತರ್ಜಾಲ ತಾಣ ವೆಬ್ ಆವೃತ್ತಿ https://suryapragathi.com ನಲ್ಲಿ ಹಾಗೂ https://epaper.suryapragathi.com ನಲ್ಲಿ ಓದಬಹುದು – ನೋಡಬಹುದು ಹೆಚ್ಚಿನ ಮಾಹಿತಿಗಾಗಿ 9901010109

# ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣವನ್ನು ಹೈಟೆಕ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಿ: ಕೆ.ಎನ್ ರಾಜಣ್ಣ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ಪಟ್ಟಣದ ಕೆ ಎಸ್ ಆರ್ ಟಿ ಸಿ ಬಸ್ ನಿಲ್ದಾಣವನ್ನು ಹೈಟೆಕ್ ಮಾದರಿಯಲ್ಲಿ ಅಭಿವೃದ್ಧಿ ಪಡಿಸಿ ನಗರ ಸಾರಿಗೆ ಬಸ್ ಗಳನ್ನು ಪ್ರಯಾಣಿಕರ ಅಗತ್ಯಗಳಿಗೆ ತಕ್ಕಂತೆ ಮತ್ತಷ್ಟು ಬಸ್ ಮಾರ್ಗಗಳನ್ನು ಹೆಚ್ಚಿಸಲಾಗುವುದು ಎಂದು ರಾಜ್ಯ ಭರವಸೆ ಕಮಿಟಿಯ ಅಧ್ಯಕ್ಷರು ಹಾಗೂ ಶಾಸಕರಾದ ಕೆ.ಎನ್ ರಾಜಣ್ಣ ತಿಳಿಸಿದರು.

ಪಟ್ಟಣದ ಶಿರಾಗೇಟ್ ಬಳಿ ಕೆ ಎಸ್ ಆರ್ ಟಿ ಸಿ ವಿಭಾಗೀಯ ಕಚೇರಿ ಹಾಗೂ ನಗರ ಸಾರಿಗೆ ಬಸ್ ಮಾರ್ಗಗಳನ್ನು ಲೋಕಾರ್ಪಣೆಗೊಳಿಸಿ ಪತ್ರಿಕಾಗೋಷ್ಠಿ ಯಲ್ಲಿ ಮಾತನಾಡಿದ ಅವರು, ಒಹಳ ಹಿಂದಿನಿಂದಲೂ ಮಧುಗಿರಿ ತಾಲೂಕು ಕಂದಾಯ ಉಪವಿಭಾಗ ಕೇಂದ್ರವಾಗಿ ವಿಸ್ತಾರಗೊಂಡಿದೆ.ನೂತನ ಕಚೇರಿ ವ್ಯಾಪ್ತಿಗೆ ಕೊರಟಗೆರೆ,ಪಾವಗಡ,ಮಧುಗಿರಿ ತಾಲೂಕುಗಳು ಈ ಕಚೇರಿಯ ವ್ಯಾಪ್ತಿಗೆ ಬಳಪಟ್ಟಿವೆ.ಈ ವಿಭಾಗೀಯ ಕಚೇರಿ ಮತ್ತು ನಗರ ಸಾರಿಗೆ ಪ್ರಾರಂಭವಾಗಿರುವುದು ಇತಿಹಾಸದ ಪುಟದಲ್ಲಿ ಉಳಿಯಲಿದೆ.ಮುಂದಿನ ದಿನಗಳಲ್ಲಿ ಕೆ ಎಸ್ ಆರ್ ಟಿ ಸಿ ಡಿಪೋ ಬಳಿ ಎರಡೂವರೆ ಎಕರೆ ಜಮೀನು ಮೀಸಲಿಟ್ಟಿದ್ದು



ವಿಭಾಗೀಯ ಕಚೇರಿ ಹಾಗೂ ಉಗ್ರಾಣಕ್ಕಾಗಿ ಅಲ್ಲಿಯೇ ಸ್ವಂತ ಕಟ್ಟಡಗಳನ್ನು ನಿರ್ಮಿಸಲಾಗುವುದು. ಮುಂದಿನ ದಿನಗಳಲ್ಲಿ ಸಂಬಂಧಪಟ್ಟ ಸಚಿವರು ಹಾಗೂ ಅಧಿಕಾರಿಗಳನ್ನು ಭೂಮಿ ಪೂಜೆಗೆ ಆಹ್ವಾನಿಸಲಾಗುವುದೆಂದರು.. ತುಮಕೂರು ಬಿಟ್ಟರೆ ಬೇರೆ ಎಲ್ಲೂ ನಗರ ಸಾರಿಗೆ ಪ್ರಾರಂಭವಾಗಿಲ್ಲ ನಮ್ಮ ಪಟ್ಟಣದಲ್ಲಿ ಆರಂಭಿಸಲಾಗಿದೆ.ವಿಭಾಗೀಯ ಕೇಂದ್ರ ಹಾಗೂ ನಗರ ಸಾರಿಗೆಯನ್ನು ಮಂಜೂರು ಮಾಡಿದ ಸಚಿವ ರಾಮಲಿಂಗರೆಡ್ಡಿ ಹಾಗೂ ಕೆ ಎಸ್ ಆರ್ ಟಿ ಸಿ ಅಧ್ಯಕ್ಷರಾದ ಶ್ರೀನಿವಾಸ್ ಮತ್ತು ವ್ಯವಸ್ಥಾಪಕ ನಿರ್ದೇಶಕ ಅಕ್ರಂಪಾಷ,ಕೇಂದ್ರ ವಿಭಾಗದ ವ್ಯವಸ್ಥಾಪಕ ಮಂಜುನಾಥ್ ರವರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಪುರುಷರು ಕಡ್ಡಾಯವಾಗಿ ಸಾರಿಗೆ ಸಂಸ್ಥೆಗಳಲ್ಲಿ ಟಿಕೆಟ್ ಪಡೆದು ಪ್ರಯಾಣಿಸಿ,ದೇಶದ ಅಭಿವೃದ್ಧಿಯಲ್ಲಿ ಸಾರಿಗೆ ಹಾಗೂ ತಂತ್ರಜ್ಞಾನವು ಪ್ರಮುಖ ಪಾತ್ರ ವಹಿಸುತ್ತವೆ.ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕೆಂಬ ಉದ್ದೇಶದಿಂದ.ತಾಲೂಕಿನಲ್ಲಿ ವಸತಿ ಶಾಲೆಗಳನ್ನು ಆರಂಭಿಸಲಾಗಿದ್ದು ಸರ್ಕಾರಿ ಡಿಪ್ಲೋಮಾ, ಐಟಿಐ,ಜಿಟಿಟಿಸಿ ಕಾಲೇಜುಗಳನ್ನು ತೆರೆಯಲಾಗುತ್ತಿದ್ದೂ ವೀರಣ್ಣತಾಂಡ ಬಳಿ ಕಾರ್ಮಿಕ ಇಲಾಖೆಯ ವತಿಯಿಂದ ಕಾರ್ಮಿಕರ ಮಕ್ಕಳಿಗಾಗಿ ವಸತಿ ಶಾಲೆಯನ್ನು ಆರಂಭಿಸಲಾಗುವುದು.ಶಾಲಾ ಕಾಲೇಜುಗಳ ಸಮಯಕ್ಕೆ ಸರಿಯಾಗಿ ಬಸ್ ಗಳ ಸಂಚಾರವಾಗ ಬೇಕೆಂದರು.,

ತುಮಕೂರು ರಾಯದುರ್ಗ ರೈಲ್ವೆ ಕಾಮಗಾರಿಗೆ ಮಧುಗಿರಿಯಲ್ಲಿ ಶೀಘ್ರ ಚಾಲನೆ :–

ರೈಲ್ವೆ ಕಾಮಗಾರಿಗೆ ಅಗತ್ಯವಾಗಿರುವ ಭೂಮಿಯನ್ನು ಸ್ವಾಧೀನವು ಪೂರ್ಣಗೊಂಡಿದ್ದು ಕಾಮಗಾರಿ ಆರಂಭಿಸುವುದರ ಬಗ್ಗೆ ಕೇಂದ್ರ ರೈಲ್ವೆ ಸಚಿವ ಹಾಗೂ ಜಿಲ್ಲಾ ಸಂಸದ ವಿ.ಸೋಮಣ್ಣನವರ ಬಳಿ ಚರ್ಚಿಸಲಾಗಿದ್ದು ತಾಲೂಕಿನ ರೈಲ್ವೆ ಕಾಮಗಾರಿಯನ್ನು ಶೀಘ್ರವಾಗಿ ಆರಂಭಿಸಲಾಗುವುದು ಎಂದರು.

ತುಮಕೂರು ವಿಭಾಗೀಯ ನಿಯಂತ್ರಣ ಅಧಿಕಾರಿ ಬಸವರಾಜು ಮಧುಗಿರಿ ನೂತನ ವಿಭಾಗೀಯ ನಿಯಂತ್ರಣ ಅಧಿಕಾರಿ ನಾಗೇಂದ್ರ ಡಿಪೋ ಮ್ಯಾನೇಜರ್ ಕಾಂತರಾಜು ,ಉಪವಿಭಾಗಾಧಿಕಾರಿ ಗೊಟೂರು ಶಿವಪ್ಪ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರುಗಳಾದ ಗೋಪಾಲಯ್ಯ ಆದಿ ನಾರಾಯಣ ರೆಡ್ಡಿ ಟಿಎ ಪಿಸಿಎಂಎಸ್ ಅಧ್ಯಕ್ಷ ಎಂಎಸ್ ಮಲ್ಲಿಕಾರ್ಜುನಯ್ಯ ಡಿಸಿಸಿ ಬ್ಯಾಂಕ್ ಉಪಾಧ್ಯಕ್ಷ ಜಿಜೆರಾಜಣ್ಣ ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ ನಾಗೇಶ್ ಬಾಬು,ಹಿರಿಯ ಮುಖಂಡ ತುಂಗೊಟಿ ರಾಮಣ್ಣ,ಎಸ್ ಬಿಟಿ ರಾಮು, ಪುರಸಭಾ ಮಾಜಿ ಅಧ್ಯಕ್ಷರುಗಳಾದ ಲಾಲಾ ಪೇಟೆ ಮಂಜುನಾಥ್ ಎಂ ಕೆ ,ನಂಜುಂಡಯ್ಯ ಎನ್ ಗಂಗಣ್ಣ ಕೆ ಪ್ರಕಾಶ್ ಮಹಮದ್ ಆಯುಬ್ ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರಂಗಪ್ಪ ಹರ್ಷ ಕುರುಬರಹಳ್ಳಿ ಮತ್ತಿತರರು ಹಾಜರಿದ್ದರು.

# ಖಾಸಗಿ ಶಾಲೆಗಳಿಗಿಂತ ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಶಿಕ್ಷಣ; ಶಾಸಕ ಸಿ.ಬಿ.ಸುರೇಶ್‌ಬಾಬು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ:–ಯಾವುದೇ ಉನ್ನತ ಶಿಕ್ಷಣ ಪಡೆಯಲು ಪ್ರಾಥಮಿಕ ಶಿಕ್ಷಣವೆಂಬದು ತಳಪಾಯವಿದ್ದಂತೆ ಅದ್ದರಿಂದ ಗುಣಾತ್ಮಕ ಶಿಕ್ಷಣವನ್ನು ಪ್ರಾಥಮಿಕ ಹಂತದಲ್ಲಿ ನೀಡಿದರೆ ಉತ್ತಮ ಹಾಗೂ ಉನ್ನತ ಶಿಕ್ಷಣಕ್ಕೆ ಅನುಕೂಲವಾಗುತ್ತದೆ ಎಂದು ಶಾಸಕ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಪಟ್ಟಣದ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ (ಪಿ.ಎಂ.ಶ್ರೀ)ಯ ಆವರಣದಲ್ಲಿ ಸೋಮವಾರ ಸಾರ್ವಜನಿಕ ಶಿಕ್ಷಣ ಇಲಾಖೆಯವತಿಯಿಂದ ಏರ್ಪಡಿಸಲಾಗಿದ್ದ 2025–26ನೇಸಾಲಿನ ಶಾಲಾ ಪ್ರಾರಂಭೋತ್ಸವ ಹಾಗೂ ಪೋಷಕರ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು ಕನ್ನಡ ಭಾಷೆ ನಮ್ಮ ಮಾತೃಭಾಷೆ ಅದನ್ನು ಪ್ರೀತಿಸಬೇಕು ಅದರಂತೆ ಜೀವನಕ್ಕೆ ಅನ್ಯಭಾಷೆಗಳು ಅಗತ್ಯ ಅದ್ದರಿಂದ ಸರ್ಕಾರವು ಈ ವರ್ಷದಿಂದ ಸರ್ಕಾರಿ ಶಾಲೆಯಲ್ಲೂ ದ್ವಿಭಾಷಾ ಸೂತ್ರ ತಂದಿದ್ದು ಇದನ್ನು ಬಳಸಿಕೊಳ್ಳುವ ಮೂಲಕ ಪೋಷಕರು ಸರ್ಕಾರಿ ಶಾಲೆಗಳಿಗೆ




ತಮ್ಮ ಮಕ್ಕಳನ್ನು ಸೇರ್ಪಡೆ ಮಾಡುವ ಮೂಲಕ ಅವುಗಳನ್ನು ಉಳಿಸಬೇಕಾಗಿದೆ ಇಂದು ಗುಣಮಟ್ಟದ ಉತ್ತಮ ಶಿಕ್ಷಕರನ್ನು ಒಳಗೊಂಡಿರುವ ಸರ್ಕಾರಿ ಶಾಲೆಗಳಲ್ಲಿ ಗುಣಾತ್ಮಕ ಸರ್ವತೋಮುಕ ಶಿಕ್ಷಣವನ್ನು ನೀಡಲಾಗುತ್ತದೆ ಈ ನಿಟ್ಟಿನಲ್ಲಿ ಶಾಲೆಯ ಶಿಕ್ಷಕರು ತಮ್ಮ ವೈಯಕ್ತಿಕ ವಿಚಾರಗಳನ್ನ ಶಾಲೆಗೆ ತರದೇ ಕೇವಲ ಶಿಕ್ಷಣ ಮಕ್ಕಳ ಭವಿಷ್ಯವನ್ನು ಗಮನದಲ್ಲಿಟ್ಟು ಕೊಂಡು ಪಾಠಮಾಡಿ ಎಂದರು.

ಬಿಇಒ ಕಾಂ ತರಾಜು ಮಾತನಾಡಿ ನಮ್ಮ ತಾಲ್ಲೂಕಿನಲ್ಲಿ ಎರಡು ಶಾಲೆಗಳು ಪಿಎಂಶ್ರೀಯಿಂದ ಕೆಪಿಎಸ್‌ಸಿ ಶಾಲೆಗಳಾಗಿವೆ ಅದರಲ್ಲಿ ತಮ್ಮಡಿಹಳ್ಳಿ ಶಾಲೆಯು ಪಿಎಂಶ್ರೀ ಯಿಂದ ಕೆಪಿಎಸ್‌ಸಿ ಶಾಲೆಯಾಗಿದ್ದು ಅದರಲ್ಲೂ ಸು. 480ಜನ ವಿದ್ಯಾರ್ಥಿಗಳು ನೊಂದಣಿಯಾಗಿದ್ದರೆ ಈ ಶಾಲೆಯನ್ನು ಕೆ ಪಿ ಎ ಸ್ ಸಿ ಶಾಲೆಯನ್ನಾಗಿ ಮಾಡಿದ್ದು ಇದರಲ್ಲೂ 480ಕ್ಕೂ ಹೆಚ್ಚು ಜನ ವಿದ್ಯಾರ್ಥಿಗಳು ನೊಂದಣಿಯಾಗಿದ್ದು ಯಾವುದೆ ಖಾಸಗಿ ಶಾಲೆಗೂ ಕಮ್ಮಿ ಇಲ್ಲದಂತೆ ಎಲ್ಲಾ ಅಂದರೆ ದೈಹಿಕ, ಸಾಂಸ್ಕೃತಿ, ಸಂಗೀತ, ಚಿತ್ರಕಲೆ, ಕರಾಟೆಯಂತಹ ಶಿಕ್ಷಣವನ್ನು ಈ ಶಾಲೆಗಳಲ್ಲಿ ಕಲಿಸಲು ಸರ್ಕಾರ ಕ್ರಮ ಕೈಗೊಂಡಿದ್ದು ಇದನ್ನು ಬಳಸಿಕೊಂಡು ಉತ್ತಮ ಶಿಕ್ಷಣವನ್ನು ನೀಡಲಾಗುತ್ತಿದೆ ಅದ್ದರಿಂದ ಇದರಲ್ಲಿ ಪೋಷಕರು ಹಾಗೂ ಮಕ್ಕಳು ಉತ್ತಮ ರೀತಿಯಲ್ಲಿ ಬಳಸಿಕೊಳ್ಳುವಂತೆ ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಮಂಜುನಾಥ್‌ಸಾಸಲು ಮಾತನಾಡಿ ಈ ಶಾಲೆಯನ್ನು ಮೈಸೂರಿನ ಅರಸರಾದ ಮುಮ್ಮಡಿ ಕೃಷ್ಣರಾಜಒಡೆಯರ್‌ರವರ ಅವದಿಯಲ್ಲಿ ಪ್ರಾರಂಭಮಾಡಿದ್ದು ಇದಕ್ಕೆ ಜಾಗವನ್ನು ನಮ್ಮ ಪಟ್ಟಣದ ಪಟ್ಟಾಭಿರಾಮಶೆಟ್ಟರು ನೀಡಿದ್ದರು ಅವರ ಕನಸು ಇಂದು ನನಸಾಗಿದ್ದು ಇಂದು ನಮ್ಮ ಶಾಲೆಯಲ್ಲಿ 500ಜನ ವಿದ್ಯಾರ್ಥಿಗಳು ಓದುವಂತಾಗಿದೆ ಈ ಶಾಲೆಯ ಅಭಿವೃದ್ದಿಗೆ ಶಾಸಕರು ಸಹಕಾರ ನೀಡಿದ್ದು ಕಳೆದ ಬಾರಿ 18ಲಕ್ಷ ಹಣ ನೀಡಿದ್ದು ಈ ಬಾರಿ 30ಲಕ್ಷ ಅನುದಾನ ಬರಲಿದ್ದು ಶಾಲೆಯ ಸರ್ವತೋಮುಖ ಅಭಿವೃದ್ದಿ ಮಾಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗವಿರಂಗಯ್ಯ, ಹಿರಿಯ ವಿದ್ಯಾರ್ಥಿಗಳ ಸಂಘದ ಅಧ್ಯಕ್ಷ ಅಧ್ಯಕ್ಷ ರಮೇಶ್, ಟಿಪಿಒ ಚಂದ್ರಶೇಖರ್, ಶಾಲೆಯ ಲತಾ ಸೇರಿದಂತೆ ಇತರರು ಇದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

# ಅಂತರಾಷ್ಟ್ರೀಯ ನಾಟಕೋತ್ಸವದಲ್ಲಿ ಪೌರಾಣಿಕ ನಾಟಕಗಳಿಗೆ ಮನ್ನಣೆ ಸಿಗಬೇಕು; ಹನುಮೇಗೌಡ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಕಲೆ, ಕಲಾವಿದರಿಗೆ ದೇಶ ಭಾಷೆಯ ವ್ಯಾಪ್ತಿ ಇಲ್ಲ. ಪೌರಾಣಿಕ ರಂಗಭೂಮಿ ಕಲೆ ನಮ್ಮ ನಡುವೆ ಇನ್ನೂ ಜೀವಂತವಾಗಿದ್ದು, ಅನೇಕ ಕಲಾವಿದರಿಗೆ ಆಸರೆಯೂ ಆಗಿದೆ. ಇಂತಹ ಕಲಾವಿದರ ಪೌರಾಣಿಕ ನಾಟಕಗಳು ಅಂತರಾಷ್ಟ್ರೀಯ ಮಟ್ಟದ ನಾಟಕೋತ್ಸವದಲ್ಲಿ ಪ್ರದರ್ಶನ ಗೊಳ್ಳುವಂತಾಗಬೇಕು ಇದಕ್ಕೆ ಸ್ಥಳೀಯ ಸರಕಾರಗಳು ನೆರವು ನೀಡಬೇಕು ಎಂದು ಕರ್ನಾಟಕ ರಾಜ್ಯ ಕಲಾವಿದರ ಹಿತರಕ್ಷಣಾ ಸಂಘ ರಾಜ್ಯಾಧ್ಯಕ್ಷ ಹನುಮೇಗೌಡ ಒತ್ತಾಯಿಸಿದ್ದಾರೆ.

ನಗರದ ಗುಬ್ಬಿ ವೀರಣ್ಣ ಕಲಾ ಕ್ಷೇತ್ರದಲ್ಲಿ ಇತ್ತೀಚೆಗೆ ಕರ್ನಾಟಕ ರಾಜ್ಯ ಕಲಾವಿದರ ಹಿತ ರಕ್ಷಣ ನೂತನ ಸಂಘದ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಸರಕಾರಗಳು ಕಲಾವಿದರ ಹಿತರಕ್ಷಣೆಗೆ ಅನೇಕ ಕಾನೂನುಗಳನ್ನ ಜಾರಿಗೊಳಿಸಿದ್ದು, ಅವುಗಳು ಯಥವತ್ತಾಗಿ ಚಾಚು ತಪ್ಪದೇ ಜಾರಿಗೆ ತರಬೇಕು. ಇದಕ್ಕೆ ಸ್ಥಳೀಯ ಸರಕಾರಗಳು ಸದಾ ಕಾಲ ನಿಲ್ಲಬೇಕು ಎಂದು ನಿರ್ಣಯ ಮಂಡಿಸಿದರು.

ರಾಜ್ಯದ ಎಲ್ಲಾ ಕಲಾ ಮಂದಿರಗಳಲ್ಲಿ ಕಲಾವಿದರು ತಮ್ಮ ಕಲೆಗಳನ್ನು ಪ್ರದರ್ಶನ ಮಾಡಲು ಅನುವು ಮಾಡಿಕೊಳ್ಳಬೇಕು. ರಂಗ ಮಂದಿರಗಳಲ್ಲಿ ಸ್ವಚ್ಚತೆ, ಶೌಚಾಲಯ ವ್ಯವಸ್ಥೆ ಸೇರಿದಂತೆ ಕಲಾವಿದರಿಗೆ ಇನ್ನಿತರ ಮೂಲಭೂತ ಸೌಕರ್ಯಗಳನ್ನು ಒದಗಿಸಬೇಕು. ರಾಜ್ಯ ಸರಕಾರ ಕಲಾವಿದರು ಪ್ರತಿ ಮಾಹೆ 2500 ಮಾಶಾಸನ ನೀಡುತ್ತಿದ್ದು,ವ ಇದನ್ನುಐದು ಸಾವಿರ ರೂ.ಗಳಿಗೆ ಹೆಚ್ಚಿಸಿ ಕಲಾವಿದರಿಗೆ ಗೌರವ ಸಹಿತ ಪ್ರೋತ್ಸಾಹಧನ ಒದಗಿಸಬೇಕು. ಸರಕಾರಗಳು ಪ್ರತಿ ಬಜೆಟ್ ನಲ್ಲಿ ರಂಗಮಂದಿರ ನಿರ್ವಹಣೆಗೆ ನೀಡಲಾಗುತ್ತಿರುವ ಅನುದಾನವನ್ನು ಸಂಬಂಧಪಟ್ಟ ಇಲಾಖೆ ಮತ್ತು ಅಧಿಕಾರಿಗಳು ಬಹಿರಂಗವಾಗಿ ಘೋಷಣೆ ಪಡಿಸಿ,ಲೆಕ್ಕಪತ್ರಗಳನ್ನು



ಸಾರ್ವಜನಿಕವಾಗಿ ಹಸ್ತಾಂತರಿಸಬೇಕು. ಸರಕಾರದಿಂದ ನೀಡಲಾಗುತ್ತಿರುವ ರಂಗಭೂಮಿ ಕಲೆಗೆ ನೀಡಲಾಗುತ್ತಿರುವ ಪ್ರಶಸ್ತಿ ಪುರಸ್ಕಾರಗಳನ್ನು ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿರುವ ಕಲಾವಿದರಿಗೆ ಸಿಗುವಂತಾಗಬೇಕು. ಜಿಲ್ಲೆ ಮತ್ತುತಾಲೂಕು ಮಟ್ಟದಲ್ಲಿ ಕಲಾ ಸೇವೆಯನ್ನು ಗುರುತಿಸಲು ಆಯ್ಕೆ ಸಮಿತಿಗಳಿದ್ದು, ಆಯ್ಕೆ ಸಮಿತಿಗಳು ಪಾರದರ್ಶಕ ನಡೆಯನ್ನು ಹೊಂದಬೇಕು ಎಂದು ಒತ್ತಾಯಿಸಿದರು.

ಕಲಾವಿದರ ಹಿತರಕ್ಷಣಾ ವೇದಿಕೆಯ ರಾಜ್ಯ ಕಾರ್ಯದರ್ಶಿ ಕೃಷ್ಣಮೂರ್ತಿ ಮಾತನಾಡಿ, ಕಲೆಯನ್ನೇ ಜೀವನವಾಗಿಸಿ ಕೊಂಡಿರುವ ಅದೆಷ್ಟೋ ಕಲಾವಿದರು, ಇಂದಿಗೂ ನಿವೇಶನ ಮತ್ತು ಸೂರು ಇಲ್ಲದೆ ಇದ್ದಾರೆ. ಇಂತಹ ಕಲಾವಿದರಿಗೆ ಸರಕಾರ ಗುರುತಿಸಿ ನಿವೇಶನ ಮತ್ತು ವಸತಿ ವ್ಯವಸ್ಥೆ ಎಲ್ಲಾ ಕಲ್ಪಿಸಬೇಕು. ಮರಣ ಹೊಂದಿದ ಕಲಾವಿದರ ಕುಟುಂಬಕ್ಕೆ ಸರಕಾರ ಸಹಾಯಧನ 5 ಲಕ್ಷಗಳನ್ನು ಶೀಘ್ರವಾಗಿ ಒದಗಿಸಬೇಕು ಎಂದು ಆಗ್ರಹಿಸಿದರು.

ನಾಡಿಗೆ ರಂಗಭೂಮಿ ಕಲೆಯಲ್ಲಿ ಹೆಸರಾಂತ ಕಲಾವಿದರನ್ನು ಸೃಷ್ಟಿಸಿ ಪರಿಚಯಿಸಿ ಕೊಟ್ಟ ಕೀರ್ತಿ ಗುಬ್ಬಿ ವೀರಣ್ಣ ಅವರಿಗೆ ಸಲ್ಲುತ್ತದೆ. ಈ ನಿಟ್ಟಿನಲ್ಲಿ ಇವರ ಐಕ್ಯ ಸ್ಥಳವನ್ನು ಒಂದು ಸ್ಮಾರಕವಾಗಿ ಗುರುತಿಸಿ, ಅಭಿವೃದ್ಧಿ ಪಡಿಸಬೇಕು. ಪ್ರತಿ ತಾಲೂಕಿನಲ್ಲಿ ಒಂದು ರಂಗ ಮಂದಿರವನ್ನು ನಿಗಧಿ ಪಡಿಸಿ, ಅಲ್ಲಿ ನಿರಂತರವಾಗಿ ಕಲೆಗಳು ಪ್ರದರ್ಶನವಾಗುವಂತೆ ಮಾಡಬೇಕು. ನಿರಂತರ ಸೇವೆ ಸಲ್ಲಿಸಿದ ಕಲಾವಿದರಿಗೆ ಸರಕಾರವೇ ಗುರುತಿನ ಚೀಟಿ ನೀಡಿ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳಬೇಕೆಂದು ಕೃಷ್ಣಮೂರ್ತಿ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಕಲಾವಿದರ ಹಿತ ರಕ್ಷಣ ಸಂಘದ ಗೌರವಾಧ್ಯಕ್ಷರಾದ ಸಿ.ಬಿ.ಪಾಪಣ್ಣ, ರಾಜ್ಯ ಖಜಾಂಚಿಗಳಾದ ಬೋರೇಗೌಡ ಸೇರಿದಂತೆ ರಾಜ್ಯ ಸಂಘದ ಸದಸ್ಯರು, ಜಿಲ್ಲೆ ಮತ್ತು ತಾಲೂಕು ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA . CONTACT : 9901010109 GMAIL: suryapragathi2021@gmail.com.